# ಕರ್ನಾಟಕ ವಿಧಾನಪರಿಷತ್ತಿನ ನಡವಳಿಕೆಗಳು
# KARNATAKA LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

೧೨೯ನೇ ಅಧಿವೇಶನ

129th Session

(16ನೇ ನವೆಂಬರ್ 2015)

**(16th NOVEMBER 2015)**

ಸಂಪುಟ ೪೩೮ ಕ್ರಮಾಂಕ (೧)

Volume 438 No. (1)


ಕರ್ನಾಟಕ ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

**Karnataka Legislature Secretariat, Bengaluru**

# ಕರ್ನಾಟಕ ವಿಧಾನಪರಿಷತ್ತಿನ ನಡವಳಿಕೆಗಳು
# KARNATAKA LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

೧೨೯ನೇ ಅಧಿವೇಶನ

129th Session

(16ನೇ ನವೆಂಬರ್ 2015)

**(16th NOVEMBER 2015)**

ಸಂಪುಟ ೪೩೮ ಕ್ರಮಾಂಕ (೧)

Volume 438 No. (1)

ಕರ್ನಾಟಕ ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

**Karnataka Legislature Secretariat, Bengaluru**

# ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ: 16ನೇ ನವೆಂಬರ್ 2015
ಸೋಮವಾರ

## ವಿಷಯಾನುಕ್ರಮಣಿಕೆ

**1. ಸಂತಾಪ ಸೂಚನೆ** **1–20**

ಮಾಜಿ ಸಂಸದ ಹಾಗೂ ವಿಧಾನ ಸಭೆಯ ಹಾಲಿ ಸದಸ್ಯರಾಗಿದ್ದ ಶ್ರೀ ಎ. ವೆಂಕಟೇಶ ನಾಯಕ, ಮಾಜಿ ಸಚಿವ ಎಂ. ಮಹದೇವ, ಸ್ವಾತಂತ್ರ್ಯ ಹೋರಾಟಗಾರ ಮತ್ತು ಹಿರಿಯ ಸಾಹಿತಿ ಡಾ: ಕಯ್ಯಾರ ಕಿಂಞಣ್ಣ ರೈ, ಪ್ರಸಿದ್ಧ ವಿದ್ವಾಂಸ ಡಾ: ಎಂ.ಎಂ. ಕಲಬುರ್ಗಿ ಹಾಗೂ ಕನ್ನಡ ಚಿತ್ರರಂಗದ ಹಿರಿಯ ನಿರ್ದೇಶಕ ಕಲಾವಿದ ಶ್ರೀ ಕೆ.ಎಸ್.ಎಲ್. ಸ್ವಾಮಿ ಅವರುಗಳ ನಿಧನದ ಬಗ್ಗೆ

ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು)

ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)

-----------

# ಕರ್ನಾಟಕ ವಿಧಾನ ಪರಿಷತ್ತು

*ಸೋಮವಾರ, 16ನೇ ನವೆಂಬರ್ 2015*

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಮಧ್ಯಾಹ್ನ 12 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.

~~~~~~~
~~~~~~~

## ಸದನವು ವಂದೇ ಮಾತರಂ ಗೀತೆಯೊಂದಿಗೆ ಪ್ರಾರಂಭವಾಯಿತು

**ಸಭಾಪತಿಯವರು:–** ಕಳೆದ ಬಾರಿ ಅಧಿವೇಶನದ ಕೊನೆಯ ದಿನ ಮುಗಿದ ನಂತರ ಇವತ್ತಿನ ದಿವಸದ ವರೆಗೆ ನಮ್ಮನ್ನು ಕೆಲವು ಹಿರಿಯರು ಅಗಲಿದ್ದಾರೆ. ಅವರನ್ನು ನೆನಪು ಮಾಡಿಕೊಂಡು ಸಂತಾಪ ಸೂಚನೆ ಸಲ್ಲಿಸತಕ್ಕಂಥದ್ದು ನಮ್ಮೆಲ್ಲರ ಜವಾಬ್ದಾರಿ ಮತ್ತು ಕರ್ತವ್ಯ. ಆ ದೃಷ್ಟಿಯಿಂದ ನಾನು ಎರಡು ಮೂರು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ.

### 01. ಸಂತಾಪ ಸೂಚನೆ

***ಸಭಾಪತಿಯವರು:– ಮಾಜಿ ಸಂಸದ ಹಾಗೂ ವಿಧಾನ ಸಭೆಯ ಹಾಲಿ ಸದಸ್ಯರಾಗಿದ್ದ ಶ್ರೀ ಎ. ವೆಂಕಟೇಶ ನಾಯಕ, ಮಾಜಿ ಸಚಿವರಾದ ಎಂ. ಮಹಾದೇವ, ಸ್ವಾತಂತ್ರ್ಯ ಹೋರಾಟಗಾರ ಮತ್ತು*** **ಹಿರಿಯ ಸಾಹಿತಿ ಡಾ: ಕಯ್ಯಾರ ಕಿಂಞಣ್ಣ ರೈ, ಪ್ರಸಿದ್ಧ ವಿದ್ವಾಂಸ ಡಾ: ಎಂ.ಎಂ. ಕಲಬುರ್ಗಿ ಹಾಗೂ ಕನ್ನಡ ಚಿತ್ರರಂಗದ ಹಿರಿಯ ನಿರ್ದೇಶಕ ಮತ್ತು ಕಲಾವಿದ ಶ್ರೀ ಕೆ.ಎಸ್.ಎಲ್. ಸ್ವಾಮಿ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.**

**01.ಶ್ರೀ ಎ. ವೆಂಕಟೇಶ ನಾಯಕ**

**ಮಾಜಿ ಸಂಸದ ಹಾಗೂ ವಿಧಾನ ಸಭೆಯ ಹಾಲಿ ಸದಸ್ಯರಾಗಿದ್ದ ಶ್ರೀ ಎ. ವೆಂಕಟೇಶ ನಾಯಕ ಅವರು ದಿನಾಂಕ: 25.08.2015ರಂದು ಆಂಧ್ರಪ್ರದೇಶದ ಪೆನುಗೊಂಡ ಬಳಿ ಸಂಭವಿಸಿದ ರೈಲು ಅಪಘಾತದಲ್ಲಿ ನಿಧನ ಹೊಂದಿರುತ್ತಾರೆ.**

1938ರ ಜೂನ್, 6ರಂದು ಅರಕೇರಾದಲ್ಲಿ ಜನಿಸಿದ್ದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದರು. 1968ರಲ್ಲಿ ಅರಕೇರಾ ಗ್ರಾಮ ಪಂಚಾಯಿತಿ ಸದಸ್ಯರಾಗಿ, ಎರಡು ಅವಧಿಗೆ ಅಧ್ಯಕ್ಷರಾಗಿ, ರಾಯಚೂರು ಎಪಿಎಂಸಿಯ ನಿರ್ದೇಶಕರಾಗಿ, ಉಪಾಧ್ಯಕ್ಷರಾಗಿ, ರಾಯಚೂರು ಜಿಲ್ಲಾ ಪರಿಷತ್ ಸದಸ್ಯರಾಗಿ, ಜಿಲ್ಲಾ ಪರಿಷತ್ ಕೃಷಿ ಉಪ ಸಮಿತಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದ ಶ್ರೀಯುತರು 10, 12, 13 ಮತ್ತು 14ನೇ ಲೋಕಸಭೆಯ ಸದಸ್ಯರಾಗಿ ಹಾಗೂ 2013ರಲ್ಲಿ ದೇವದುರ್ಗ ವಿಧಾನ ಸಭಾ ಕ್ಷೇತ್ರದಿಂದ ಸ್ಪರ್ಧಿಸಿ 14ನೇ ವಿಧಾನ ಸಭೆಗೆ ಆಯ್ಕೆಯಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಸರಳ, ಸಜ್ಜನ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

**೦೨.ಶ್ರೀ ಎಂ. ಮಹಾದೇವ**

**ಮಾಜಿ ಸಚಿವರಾದ ಶ್ರೀ ಎಂ.ಮಹಾದೇವ ಅವರು ದಿನಾಂಕ: ೦೪.೦೮.೨೦೧೫ರಂದು ನಿಧನ ಹೊಂದಿರುತ್ತಾರೆ.**

೧೯೩೮ರ ಫೆಬ್ರವರಿ, ೯ರಂದು ನಂಜನಗೂಡಿನಲ್ಲಿ ಜನಿಸಿದ್ದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದರು.

ನೇರ ನಡೆನುಡಿ ಮತ್ತು ನಿಷ್ಠುರವಾದಕ್ಕೆ ಹೆಸರಾಗಿದ್ದ ಶ್ರೀಯುತರು ನಂಜನಗೂಡು ಕ್ಷೇತ್ರದಿಂದ 7, ೯ ಮತ್ತು 11ನೇ ವಿಧಾನ ಸಭೆಗೆ ಆಯ್ಕೆಯಾಗಿದ್ದು, ಶ್ರೀ ಎಸ್.ಎಂ. ಕೃಷ್ಣರವರ ಸರ್ಕಾರದಲ್ಲಿ ರೇಷ್ಮೆ ಹಾಗೂ ಜವಳಿ, ಪಶುಸಂಗೋಪನೆ ಮತ್ತು ಸಕ್ಕರೆ ಖಾತೆಗಳ ಸಚಿವರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಶ್ರೀಯುತರು ರಾಜ್ಯ ಅಪೆಕ್ಸ್ ಬ್ಯಾಂಕಿನ ನಿರ್ದೇಶಕರಾಗಿ, ಭಾರತೀಯ ಸೇವಾ ದಳದ ಕಾರ್ಯದರ್ಶಿಯಾಗಿ, ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷರಾಗಿ ಹೀಗೆ ಹಲವಾರು ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಸೇವೆ ಸಲ್ಲಿಸಿರುತ್ತಾರೆ.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಸರಳ, ಸಜ್ಜನ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.**

**೦೩.ಡಾ: ಕಯ್ಯಾರ ಕಿಂಞಣ್ಣ ರೈ**

**ಕನ್ನಡದ ಹಿರಿಯ ಸಾಹಿತಿ ನಾಡೋಜ ಡಾ: ಕಯ್ಯಾರ ಕಿಂಞಣ್ಣ ರೈ ಅವರು ದಿನಾಂಕ:೦೯.೦೮.೨೦೧೫ ರಂದು ನಿಧನ ಹೊಂದಿರುತ್ತಾರೆ.**

1915ರ ಜೂನ್, 8ರಂದು ಕಾಸರಗೂಡು ತಾಲ್ಲೂಕಿನ ಪೆರಡಾಲ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಸಂಸ್ಕೃತ ಮತ್ತು ಕನ್ನಡ ವಿದ್ವಾನ್ ಪರೀಕ್ಷೆಗಳಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದರು. ಕಾಸರಗೂಡು ವಿಲೀನೀಕರಣದ ಮುಂಚೂಣಿ ಹೋರಾಟಗಾರರಾಗಿ, ಶ್ರೇಷ್ಠ ಕವಿಯಾಗಿ, ಉತ್ತಮವಾಗ್ಮಿಯಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ಪ್ರಗತಿಪರ ಕೃಷಿಕರಾಗಿ ಹತ್ತು ಹಲವು ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದ ಶ್ರೀಯುತರು ಕಾಸರಗೂಡನ್ನು ಕೇರಳಕ್ಕೆ ಸೇರಿಸಿದ್ದನ್ನು ಬಲವಾಗಿ ವಿರೋಧಿಸಿದ ಅವರು ತಮ್ಮ ಜೀವತಾವಧಿಯಲ್ಲೇ ಕಾಸರಗೂಡು ಕರ್ನಾಟಕಕ್ಕೆ ವಿಲೀನವಾಗುವುದನ್ನು ನೋಡಲು ಬಯಸಿದ್ದರು. ಗಡಿ ವಿವಾದದ ಸಂಬಂಧ ಮಹಾಜನ್ ಆಯೋಗ ನೀಡಿದ ವರದಿ ಪೂರ್ಣ ಜಾರಿಗೆ ಬರಬೇಕೆಂದು ಆಗ್ರಹಿಸಿದ್ದರು. ಅಧ್ಯಾಪನ ಸಾಹಿತ್ಯದೊಂದಿಗೆ ಪತ್ರಕರ್ತರಾಗಿಯೂ ಕಯ್ಯಾರರು ಸೇವೆ ಸಲ್ಲಿಸಿದ್ದರು ಹಾಗೂ ಮಹಾತ್ಮ ಗಾಂಧೀಜಿಯವರ ಕರೆಯಂತೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು.

ಕಯ್ಯಾರರು, ಶ್ರೀಮುಖ, ಐಕ್ಯಗಾನ, ಪುನರ್ನವ, ಮಕ್ಕಳ ಪದ್ಯಮಂಜರಿ– ಭಾಗ–1 ಮತ್ತು 2, ಚೇತನ, ಪಂಚಮಿ, ಶತಮಾನದ ಗಾನ, ಪ್ರತಿಭಾಪಯಸ್ವಿನೀ ಸಾಹಿತ್ಯ ಕೃತಿಗಳು ಹಾಗೂ ರತ್ನರಾಶಿ–ರಾಷ್ಟ್ರ ಧುರೀಣರ ಜೀವನ ಚಿತ್ರಣಗಳು, ಲಕ್ಷ್ಮೀಶನ ಲಲಿತ ಕಥೆಗಳು–ಜೈಮಿನಿ ಭಾರತದ ಕಥೆಗಳು ಗದ್ಯರೂಪದಲ್ಲಿ, ಅನ್ನದೇವರು ಮತ್ತು ಇತರ ಕಥೆಗಳು–ಸ್ವತಂತ್ರ್ಯ ಸಣ್ಣಕಥೆಗಳ ಸಂಗ್ರಹ, ಪರಶುರಾಮ–ಪುರಾಣ ಮಹಾಪುರುಷರ ಜೀವನ ಚಿತ್ರಣವನ್ನು ಗದ್ಯಕೃತಿಗಳಲ್ಲಿ ರಚಿಸಿದ್ದಾರೆ. ವ್ಯಾಕರಣ ಮತ್ತು ಪ್ರಬಂಧ, ವಿದ್ಯಾರ್ಥಿಗಳ ಕನ್ನಡ ಪಾಠಮಾಲೆ ಹಾಗೂ ರಾಷ್ಟ್ರಕವಿ ಗೋವಿಂದ ಪೈ– ಜೀವನ ಚಿತ್ರಣವನ್ನು ರಚಿಸಿದ್ದಾರೆ. ಗಡಿ ನಾಡಿನಲ್ಲಿ ಕನ್ನಡದ ಕಂಪನ್ನು ಹರಡುತ್ತ ಮಲೆಯಾಳಂ ಸಾಹಿತ್ಯವನ್ನೂ ಅಷ್ಟೇ ಪ್ರೀತಿಸಿದ್ದರು. ಇವುಗಳಲ್ಲದೆ ಇತರ ಹತ್ತು ಹಲವಾರು ಸಾಹಿತ್ಯಕ ಕೃತಿಗಳನ್ನು ರಚಿಸಿ ಕನ್ನಡ ಸಾರಸ್ವತ ಲೋಕಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದಾರೆ.

1985ರಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮೇಳನದ ಅಧ್ಯಕ್ಷರಾಗಿದ್ದರಲ್ಲದೆ, ಶ್ರೇಷ್ಠ ಅಧ್ಯಾಪಕ ರಾಷ್ಟ್ರ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ ಗೌರವ, ಮಂಗಳೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಪರಿಷತ್ ಗೌರವ ಫೆಲೋಶಿಫ್, ಪಂಪ ಪ್ರಶಸ್ತಿ, ಕರ್ನಾಟಕ ಏಕೀಕರಣ ಪ್ರಶಸ್ತಿಗಳಲ್ಲದೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಶ್ರೀಯುತರು ಭಾಜನರಾಗಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಷ್ಟ್ರವು ಒಬ್ಬ ಶ್ರೇಷ್ಠ ಸಾಹಿತಿ, ಆದರ್ಶ ಶಿಕ್ಷಕ, ಸೃಜನಶೀಲ ಬರಹಗಾರರನ್ನು ಕಳೆದುಕೊಂಡಂತಾಗಿದೆ.**

**04. ಡಾ: ಎಂ.ಎಂ. ಕಲಬುರ್ಗಿ**

**ಕರ್ನಾಟಕದ ಪ್ರಸಿದ್ಧ ವಿದ್ವಾಂಸರಾದ ಡಾ:ಎಂ.ಎಂ. ಕಲಬುರ್ಗಿ ಅವರು ದಿನಾಂಕ: 30.08.2015 ರಂದು ನಿಧನ ಹೊಂದಿರುತ್ತಾರೆ.**

1938ರ ನವೆಂಬರ್, 28ರಂದು ವಿಜಯಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ಗುಬ್ಬೆವಾಡ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಕರ್ನಾಟಕ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಯನ್ನು ಪಡೆದು, 1962ರಲ್ಲಿ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿಜೀವನ ಆರಂಭಿಸಿದ್ದ ಶ್ರೀಯುತರು 1966ರಲ್ಲಿ ಕರ್ನಾಟಕ ವಿವಿಯ ಕನ್ನಡ ಅಧ್ಯಯನ ಪೀಠದಲ್ಲಿ ಅಧ್ಯಾಪಕರಾಗಿ, 1998-2001ರ ಕಾಲಾವಧಿಯಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಉಪ ಕುಲಪತಿಗಳಾಗಿ ಸೇವೆಯನ್ನು ಸಲ್ಲಿಸಿದ್ದರು. ಸೃಜನಶೀಲ ಹಾಗೂ ಸಂಶೋಧನೆ ಈ ಎರಡೂ ಪ್ರಕಾರಗಳಲ್ಲಿ ಎಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

ಕನ್ನಡ ಹಸ್ತಪ್ರತಿ ಶಾಸ್ತ್ರ, ಕನ್ನಡ ಗ್ರಂಥ ಸಂಪಾದನಾ ಶಾಸ್ತ್ರ, ಕನ್ನಡ ಸಂಶೋಧನ ಶಾಸ್ತ್ರ, ಕನ್ನಡ ನಾಮವಿಜ್ಞಾನ, ಧಾರವಾಡ ಜಿಲ್ಲೆಯ ಶಾಸನ ಸೂಚಿ, ಮಹಾರಾಷ್ಟ್ರದ ಕನ್ನಡ ಶಾಸನಗಳು, ಶಾಸನಗಳಲ್ಲಿ ಶಿವಶರಣರು, ಶಬ್ದಮಣಿ ದರ್ಪಣ ಸಂಗ್ರಹಗಳ ಸಾಹಿತ್ಯ, ಶಾಸನ ಶಾಸ್ತ್ರ ಮತ್ತು ಶೈಕ್ಷಣಿಕ ಶಿಸ್ತುಗಳ ಕುರಿತ ಕೃತಿಗಳನ್ನು ರಚಿಸಿದ್ದಾರೆ ಹಾಗೂ ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಜಾನಪದ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ ಸೇರಿದಂತೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಶ್ರೀಯುತರು ಭಾಜನರಾಗಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಶ್ರೇಷ್ಠ ಸಾಹಿತಿ ಹಾಗೂ ಸಂಶೋಧನಾ ಅಧ್ಯಯನಕಾರರನ್ನು ಕಳೆದುಕೊಂಡಂತಾಗಿದೆ.**

**೦೫. ಶ್ರೀ ಕೆ.ಎಸ್.ಎಲ್. ಸ್ವಾಮಿ**

**ಕನ್ನಡ ಚಿತ್ರರಂಗದ ಹಿರಿಯ ನಿರ್ದೇಶಕ ಹಾಗೂ ಕಲಾವಿದ ಶ್ರೀ ಕೆ.ಎಸ್.ಎಲ್. ಸ್ವಾಮಿ ಅವರು ದಿನಾಂಕ: ೨೦.೧೦.೨೦೧೫ ರಂದು ನಿಧನ ಹೊಂದಿರುತ್ತಾರೆ.**

೧೯೩೮ರಲ್ಲಿ ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕಿನ ಕಿಕ್ಕೇರಿಯಲ್ಲಿ ಜನಿಸಿದ್ದ ಶ್ರೀಯುತರು ಕನ್ನಡ ಚಿತ್ರರಂಗದ ಭೀಷ್ಮ ಜಿ.ವಿ. ಅಯ್ಯರ್ ಗರಡಿಯಲ್ಲಿ ಪಳಗಿದವರು. ನಂತರ ಹಿರಿಯ ನಿರ್ದೇಶಕರುಗಳಾದ: ಎಂ.ಆರ್.ವಿಠಲ್ ಹಾಗೂ ಪುಟ್ಟಣ್ಣ ಕಣಗಾಲ್ ಜತೆಯೂ ಹಲವು ಚಿತ್ರಗಳಲ್ಲಿ ಕೆಲಸ ನಿರ್ವಹಿಸಿದ್ದರಲ್ಲದೆ, ಹಲವು ಚಿತ್ರಗಳನ್ನು ಸಹ ನಿರ್ಮಾಣ ಮಾಡಿರುತ್ತಾರೆ. ೧೯೬೬ರಲ್ಲಿ ಸ್ವತಂತ್ರ ನಿರ್ದೇಶಕರಾಗಿ ವೃತ್ತಿ ಆರಂಭಿಸಿದ ಇವರು ಗಾಂಧಿನಗರ, ಲಗ್ನಪತ್ರಿಕೆ, ಭಾಗ್ಯದ ಬಾಗಿಲು, ಮಲಯಮಾರುತ, ಜಿಮ್ಮಿಗಲ್ಲು, ಮಿಥಿಲೆಯ ಸೀತೆಯರು ಹಾಗೂ ದೇವರ ದುಡ್ಡು ಸೇರಿದಂತೆ ೩೫ಕ್ಕೂ ಹೆಚ್ಚು ಚಿತ್ರಗಳಿಗೆ ನಿರ್ದೇಶನ ಮಾಡಿದ್ದಾರೆ. ಹಲವು ಚಿತ್ರಗಳಲ್ಲಿ ಗಾಯಕರಾಗಿ ಹಾಗೂ ನಟರಾಗಿ ಅಭಿನಯಿಸಿರುವುದಲ್ಲದೆ, ಕಿರುತೆರೆಯಲ್ಲೂ ತಮ್ಮ ಛಾಪು ಮೂಡಿಸಿರುವ ಇವರು "ಮೂಡಲ ಮನೆ" ಸೇರಿದಂತೆ ಹಲವು ಜನಪ್ರಿಯ ಟಿ.ವಿ ಧಾರವಾಹಿಗಳಲ್ಲಿ ನಟಿಸಿ, ನಿರ್ದೇಶನವನ್ನೂ ಸಹ ಮಾಡಿರುತ್ತಾರೆ.

ಶ್ರೀಯುತರಿಗೆ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ, ಡಾ:ಬಿ. ಸರೋಜಾದೇವಿ ಪ್ರಶಸ್ತಿ ಸೇರಿದಂತೆ ಇವರು ನಿರ್ದೇಶಿಸಿದ "ಜಂಬೂ ಸವಾರಿ" ಚಲನಚಿತ್ರಕ್ಕೆ ಕೇಂದ್ರ ಸರ್ಕಾರದಿಂದ ಅತ್ಯುತ್ತಮ ಮಕ್ಕಳ ಚಿತ್ರ ಪ್ರಶಸ್ತಿಯನ್ನು ಪಡೆದಿದ್ದರು.

**ಶ್ರೀಯುತರ ನಿಧನದಿಂದಾಗಿ ಕನ್ನಡ ಚಲನಚಿತ್ರ ರಂಗವು ಅತ್ಯುತ್ತಮ ನಿರ್ದೇಶಕರೊಬ್ಬರನ್ನು ಕಳೆದುಕೊಂಡಂತಾಗಿದೆ.**

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಸಂತಾಪ ಸೂಚನೆಯ ಬಗ್ಗೆ ನನ್ನ ಮಾತುಗಳನ್ನು ಪ್ರಾರಂಭಿಸುವುದಕ್ಕೆ ಪೂರ್ವದಲ್ಲಿ ಹಿರಿಯರು ಮತ್ತು ಅನುಭವಿಗಳು ಆದಂತಹ ಡಾ||ಜಿ.ಪರಮೇಶ್ವರ್‌ರವರು ಗೃಹ ಸಚಿವರಾಗಿ ಪ್ರಥಮ ಬಾರಿಗೆ ನಮ್ಮ ಸದನಕ್ಕೆ ಬಂದಿದ್ದಾರೆ. ಅವರನ್ನು ನಾನು ಸದನಕ್ಕೆ ಪರಿಚಯಿಸುತ್ತಿದ್ದೇನೆ.

ಸನ್ಮಾನ್ಯ ಕೆ.ಗೋವಿಂದರಾಜ್ ಅವರು ಸಂಸದೀಯ ಕಾರ್ಯದರ್ಶಿಗಳಾಗಿ ನೇಮಕಗೊಂಡಿದ್ದಾರೆ. ಅವರನ್ನು ಸಹ ನಾನು ಸದನಕ್ಕೆ ಪರಿಚಯ ಮಾಡಿಕೊಡುತ್ತಿದ್ದೇನೆ.

ರಾಜ್ಯ ಸಚಿವರಾಗಿದ್ದ ಸಹೋದರಿ ಶ್ರೀಮತಿ ಉಮಾಶ್ರೀ ಅವರು ಈಗ ಸಂಪುಟ ದರ್ಜೆ ಸಚಿವರಾಗಿ ನೇಮಕಗೊಂಡಿದ್ದಾರೆ. ಅವರನ್ನು ಸಹ ಸದನಕ್ಕೆ ನಾನು ಪರಿಚಯ ಮಾಡಿಕೊಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ತಾವು ಮಂಡಿಸಿದಂತಹ ಸಂತಾಪ ಸೂಚಕ ಗೊತ್ತುವಳಿಯನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ, ನಮ್ಮನ್ನಗಲಿರುವಂತಹ ಅತ್ಯಂತ ಹಿರಿಯ ಚೇತನಗಳೇನು ಸಾರ್ಥಕ ಬದುಕು ನಡೆಸಿ ನಮ್ಮನ್ನಗಲಿ ಹೋಗಿದ್ದಾರೆ, ಅವರಲ್ಲಿ ಹಾಲಿ ಸದಸ್ಯರಾಗಿದ್ದಂತಹ ಶ್ರೀ ಎ.ವೆಂಕಟೇಶ ನಾಯಕ ಅವರು, ಮಾಜಿ ಸಚಿವರಾದಂತಹ ಶ್ರೀ ಎಂ.ಮಹಾದೇವ ಅವರು, ಸ್ವಾತಂತ್ರ್ಯ ಹೋರಾಟಗಾರರು, ಹಿರಿಯ ಸಾಹಿತಿಗಳಾದಂತಹ ಕಯ್ಯಾರ ಕಿಂಞಣ್ಣ ರೈ ಅವರು, ಪ್ರಸಿದ್ಧ ವಿದ್ವಾಂಸರಾದಂತಹ ಡಾ||ಎಂ.ಎಂ. ಕಲಬುರ್ಗಿಯವರು ಮತ್ತು ಮಹಾನ್ ಕಲಾವಿದರಾದಂತಹ ಶ್ರೀ ಕೆ.ಎಸ್.ಎಲ್.ಸ್ವಾಮಿ ಅವರ ಕುರಿತು ಸರ್ಕಾರದ ಪರವಾಗಿ ನಾಲ್ಕು ಮಾತುಗಳನ್ನಾಡುವುದಕ್ಕೆ ನನಗೆ ಅವಕಾಶ ಕಲ್ಪಿಸಿದ್ದಕ್ಕಾಗಿ ನಾನು ಪ್ರಾರಂಭದಲ್ಲಿಯೇ ತಮಗೆ ಕೃತಜ್ಞತೆಗಳನ್ನರ್ಪಿಸಿ ನನ್ನ ಮಾತುಗಳನ್ನು ಪ್ರಾರಂಭಿಸುತ್ತಿದ್ದೇನೆ.

ಶ್ರೀಯುತ ವೆಂಕಟೇಶ್ ನಾಯಕ ಅವರು ಕೆಳಮನೆಯ ಹಾಲಿ ಶಾಸಕರು, ಮಾಜಿ ಸಂಸತ್ ಸದಸ್ಯರು, ನಮ್ಮ ಪಕ್ಷದಲ್ಲಿ ಅತ್ಯಂತ ಹಿರಿಯ ಒಬ್ಬ ನಾಯಕರಾಗಿದ್ದರು. ನಾಲ್ಕೂವರೆ ದಶಕಗಳಿಂದ ಅಂದರೆ, ಸುಮಾರು 45 ವರ್ಷಗಳ ಕಾಲ ರಾಜಕಾರಣದಲ್ಲಿ ಸಕ್ರಿಯವಾಗಿ ಪಾಲ್ಗೊಂಡಂತಹ ಅತ್ಯಂತ ಶ್ರೇಷ್ಠ ಸಂಸದೀಯ ಪಟುಗಳಾಗಿದ್ದ ಅವರು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನಲ್ಲಿ ಜನಿಸಿ ತಮ್ಮ ರಾಜಕೀಯ ಜೀವನವನ್ನು ಬಹಳ ವಿಶಿಷ್ಟವಾದ ಅತ್ಯಂತ ಕೆಳಹಂತದಿಂದ ಗ್ರಾಮ ಪಂಚಾಯಿತಿಯ ಸದಸ್ಯರಾಗಿ ಪ್ರಾರಂಭಿಸಿದರು. ಅಷ್ಟೇ ಅಲ್ಲದೆ ಎರಡು ಬಾರಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಕೂಡ ಅವರು ಕೆಲಸ ಮಾಡಿದ್ದರು. ಒಕ್ಕಲುತನ ಹುಟ್ಟುವಳಿ ಮಾರಾಟ ಸಮಿತಿಯ ಉಪಾಧ್ಯಕ್ಷರಾಗಿಯೂ ಅವರು ಕೆಲಸ ಮಾಡಿದ್ದರು. ಅಲ್ಲದೆ ರಾಯಚೂರು ಜಿಲ್ಲಾ ಪಂಚಾಯಿತಿಯ ಸದಸ್ಯರಾಗಿ ಕೂಡ ಕೆಲಸ

ನಿರ್ವಹಿಸಿರುವ ಅವರು ಸ್ಥಳೀಯ ಸಂಸ್ಥೆಯ ಇಷ್ಟೆಲ್ಲಾ ಸ್ಥಾನಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಜೊತೆಗೆ ಅವರು ಬ್ಲಾಕ್ ಅಧ್ಯಕ್ಷರಾಗಿ ಪಕ್ಷದ ಸಂಘಟನೆಯಲ್ಲಿ ಕೂಡ ತಮ್ಮನ್ನು ತೊಡಗಿಸಿಕೊಂಡಿದ್ದರು. ರಾಯಚೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಸಹ ಅವರು ಕಾರ್ಯನಿರ್ವಹಿಸಿದ್ದರು. ಅವರು ಬ್ಲಾಕ್ ಅಧ್ಯಕ್ಷರಾಗಿ, ಈ ಸದನದ ಹಾಲಿ ಸದಸ್ಯರಾದ ಶ್ರೀಯುತ ಎನ್.ಎಸ್.ಬೋಸ್‌ರಾಜ್‌ರವರು ಅವಿಭಾಜ್ಯ ರಾಯಚೂರು ಜಿಲ್ಲೆಯ ಅಧ್ಯಕ್ಷರಾಗಿದ್ದುದನ್ನು ನಾನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದಕ್ಕೆ ಬಯಸುತ್ತೇನೆ.

1991ರಲ್ಲಿ ಪ್ರಥಮ ಬಾರಿಗೆ ಲೋಕಸಭೆಯನ್ನು ಪ್ರವೇಶ ಮಾಡಿದಂತಹ ಕೀರ್ತಿಗೆ ಭಾಜನರಾದ ಅವರು, ಅನಂತರ ಸತತವಾಗಿ 1998–99 ರಿಂದ 2004ರವರೆಗೆ 3 ಬಾರಿ ಹ್ಯಾಟ್ರಿಕ್ ಸಾಧನೆಗೈದು ಲೋಕಸಭೆಯನ್ನು ಪ್ರವೇಶ ಮಾಡಿ ಅತ್ಯುತ್ತಮ ಕೆಲಸವನ್ನು ಮಾಡಿದಂತಹವರು. 2013ರಲ್ಲಿ ವಿಧಾನಸಭೆಗೆ ನಡೆದಂತಹ ಮಹಾ ಚುನಾವಣೆಯಲ್ಲಿ ದೇವದುರ್ಗದಿಂದ ಆಯ್ಕೆಯಾದ ಅವರು ವಿಧಾನಸಭೆಯ ಸದಸ್ಯರಾಗಿ ಕೂಡ ಕೆಲಸ ಮಾಡಿದ್ದಾರೆ. ಶ್ರೀಯುತ ವೆಂಕಟೇಶ ನಾಯಕ್‌ರವರು ಬಹಳಷ್ಟು ಸರಳ ಸಜ್ಜನ ರಾಜಕಾರಣಿಗಳೆಂದರೆ ಬಹುಶಃ ತಪ್ಪಾಗಲಿಕ್ಕಿಲ್ಲ. ಅವರು ಎಷ್ಟು ಸಜ್ಜನಿಕೆಯ ವ್ಯಕ್ತಿಯಾಗಿದ್ದರೆಂದರೆ, ತಮ್ಮ ಕಡುವಿರೋಧಿಗಳಿಗೆ ಕೂಡ ನೋವನ್ನುಂಟು ಮಾಡಲಾರದಂತಹ ಒಬ್ಬ ನಿರುಪದ್ರವಿ ರಾಜಕಾರಣಿಯಾಗಿದ್ದ ಅವರನ್ನು ಬಹಳಷ್ಟು ಜನರು 'ಪುಣ್ಯಕೋಟಿ' ಎಂದು ಕರೆಯುತ್ತಿದ್ದರು. ಅಂದರೆ ತಮ್ಮ ವಿರೋಧಿಗಳಿಗೆ ಕೂಡ ಅವರು ಒಳ್ಳೆಯದನ್ನು ಬಯಸುತ್ತಿದ್ದರು.

ಇವತ್ತು ತಾವು 12ನೇ ಶತಮಾನದಲ್ಲಿ ಬಾಳಿ ಬದುಕಿದಂತಹ ವಿಶ್ವಗುರು ಅಣ್ಣ ಜಗಜ್ಯೋತಿ ಬಸವಣ್ಣನವರ ಭಾವಚಿತ್ರವನ್ನು ನಮ್ಮ ಸದನದಲ್ಲಿ ಅನಾವರಣಗೊಳಿಸಿರುತ್ತೀರಿ. 'ವೈರಿಗೂ ಲೇಸನ್ನು ಬಯಸಬೇಕು' ಎನ್ನುವ ಜಗಜ್ಯೋತಿ ಬಸವಣ್ಣನವರ ವಿಚಾರ ಧಾರೆಯಂತೆ ಅವರು ತಮ್ಮ ವಿರೋಧಿಗಳು ಕೆಟ್ಟದನ್ನು ಮಾಡಿದರೂ ಸಹ ಅವರಿಗೆ ಲೇಸನ್ನು ಬಯಸಿದಂತಹ ಅತ್ಯಂತ ಸರಳ ರಾಜಕಾರಣಿ. ನಿಜವಾಗಿಯೂ ಅವರ ಅಗಲಿಕೆ ನಮ್ಮ ನಾಡಿನ ಸಾರ್ವಜನಿಕ ಬದುಕಿಗೆ, ಅದರಲ್ಲಿಯೂ ವಿಶೇಷವಾಗಿ ನಮ್ಮ ಪಕ್ಷಕ್ಕೆ ಒಂದು ದೊಡ್ಡ ಹಾನಿ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾಜಿ ಸಚಿವರಾದಂತಹ ಶ್ರೀಯುತ ಎಂ.ಮಹಾದೇವ ಅವರು ವೃತ್ತಿಯಲ್ಲಿ ಕೃಷಿಕರು. ನೇರ ನಡೆನುಡಿಯ ವ್ಯಕ್ತಿಯಾಗಿದ್ದ ಅವರು ಇದ್ದುದನ್ನು ಇದ್ದಂತೆ ಕಡಾಖಂಡಿತವಾಗಿ ಹೇಳುವಂತಹ ಪ್ರವೃತ್ತಿಯನ್ನು ಹೊಂದಿದ್ದ ಬಹಳ ನಿಷ್ಠುರವಾದಿಗಳು. ಇಂತಹ ಒಬ್ಬ ರಾಜಕಾರಣಿ ಮೂರು ಭಾರಿ ಅಂದರೆ, 7ನೇ, 9ನೇ ಮತ್ತು 11ನೇ ವಿಧಾನ ಸಭೆಗೆ ಸದಸ್ಯರಾಗಿ ಆಯ್ಕೆಯಾಗಿ ಶ್ರೀಮಾನ್ ಎಸ್.ಎಂ.ಕೃಷ್ಣ

ಅವರು ಈ ನಾಡಿನ ಮುಖ್ಯ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ರೇಷ್ಮೆ, ಜವಳಿ, ಪಶುಸಂಗೋಪನೆ, ಸಕ್ಕರೆ ಈ ರೀತಿ ಅನೇಕ ಖಾತೆಗಳಲ್ಲಿ ಕಾರ್ಯನಿರ್ವಹಿಸಿದ್ದರು. ಹಿರಿಯ ಸಹಕಾರಿಗಳಾಗಿದ್ದ ಇವರು ಕರ್ನಾಟಕ ರಾಜ್ಯ ಅಪೆಕ್ಸ್ ಕೋ–ಆಪರೇಟೀವ್ ಬ್ಯಾಂಕ್‌ನ ನಿರ್ದೇಶಕರಾಗಿ ಕೂಡ ಕೆಲಸ ಮಾಡುವುದರ ಜೊತೆಗೆ ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷರಾಗಿ ಅನೇಕ ಹತ್ತು ಹಲವಾರು ಮಜಲುಗಳಲ್ಲಿ ಅತ್ಯುತ್ತಮವಾದಂತಹ ಕೆಲಸ ಕಾರ್ಯಗಳ ಮುಖಾಂತರ ಈ ನಾಡಿನ ಗಮನ ಸೆಳೆದಿದ್ದಾರೆ. ಸನ್ಮಾನ್ಯ ಎಂ.ಮಹಾದೇವ ಅವರು ನೇರ ನಡೆನುಡಿಗೆ ಇನ್ನೊಂದು ಹೆಸರು ಎನ್ನುವಂತಹ ವಿಚಾರ ಇಡೀ ನಾಡಿನ ಉದ್ದಗಲಕ್ಕೂ ಹರಡಿತ್ತು. ಇಂತಹ ಒಬ್ಬ ಹಿರಿಯ ನಿಷ್ಠುರ ರಾಜಕಾರಣಿಯ ನಿಧನದಿಂದ ನಿಜಕ್ಕೂ ಸಾರ್ವಜನಿಕ ಬದುಕಿಗೆ, ಸಾರ್ವಜನಿಕ ರಂಗಕ್ಕೆ ಒಂದು ದೊಡ್ಡ ಹಾನಿಯನ್ನು ಉಂಟುಮಾಡಿದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಕನ್ನಡದ ಹಿರಿಯ ಸಾಹಿತಿ ನಾಡೋಜ, ಸ್ವಾತಂತ್ರ್ಯ ಹೋರಾಟಗಾರ ಮತ್ತು ಹಿರಿಯ ಸಾಹಿತಿ ಡಾ:ಕಯ್ಯಾರ ಕಿಂಞಣ್ಣ ರೈ ಅವರು ಶತಾಯುಷಿ. ಅವರು ನೂರು ವರ್ಷ ಅರ್ಥಪೂರ್ಣವಾದಂತಹ ಸಾರ್ಥಕ ಬದುಕನ್ನು ನಡೆಸಿದಂಥವರು. ಕನ್ನಡದ ಅತ್ಯಂತ ಹಿರಿಯ ಸಾಹಿತಿಗಳು, ಕನ್ನಡದ ಸಾರಸತ್ವ ಲೋಕವನ್ನೇ ಶ್ರೀಮಂತಗೊಳಿಸಿದಂತಹ ಡಾ:ಕಯ್ಯಾರ ಕಿಂಞಣ್ಣ ರೈ ಅವರ ಅಗಲಿಕೆಯಿಂದ ನಿಜವಾಗಿಯು ನಮ್ಮ ನಾಡಿಗೆ ಬಹಳ ದೊಡ್ಡದಾದಂತಹ ಹಾನಿಯಾಗಿದೆ. ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಅವರ ಬದುಕಿನ ಉದ್ದಕ್ಕೂ ಹೋರಾಟ ಮಾಡಿದಂಥವರು. ತಮ್ಮ ಜೀವಿತ ಅವಧಿಯಲ್ಲಿಯೇ ಕಾಸರಗೂಡು ಕರ್ನಾಟಕದ ಅಂಗವಾಗಬೇಕು, ಅದು ಕರ್ನಾಟಕಕ್ಕೆ ಸೇರಬೇಕೆಂದು ಬಹಳಷ್ಟು ಹೋರಾಟ ಮಾಡಿದರು. ಅವರು ಕನ್ನಡದ ಅತ್ಯಂತ ಹಿರಿಯ ಸಾಹಿತಿ ಹಾಗೂ ಅತ್ಯಂತ ವಾಕ್ಪಟುತ್ವ ಹೊಂದಿದಂಥವರು. ಎಲ್ಲಕ್ಕಿಂತ ಮಿಗಿಲಾಗಿ ಸ್ವಾತಂತ್ರ್ಯ ಸೇನಾನಿ. ರಾಷ್ಟ್ರಪಿತ ಮಹಾತ್ಮಗಾಂಧಿಯವರ ಸ್ವಾತಂತ್ರ್ಯ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾಗಿ ಭಾರತಾಂಬೆಯನ್ನು ದಾಸ್ಯ ಸಂಕೋಲೆಗಳಿಂದ ಬಿಡುಗಡೆ ಮಾಡುವುದಕ್ಕೆ ಬಹು ದೊಡ್ಡ ಕೊಡುಗೆಯನ್ನು ನೀಡಿದಂತಹ ಮಹಾನ್ ಕವಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಗಡಿನಾಡಿನಲ್ಲಿ ಕನ್ನಡದ ಬಗ್ಗೆ ಹೆಚ್ಚು ಕೆಲಸ ಕಾರ್ಯ ಮಾಡಿದಂಥವರು. ಮಾನ್ಯ ಸಭಾಪತಿಯವರೇ, ತಮಗೆ ನೆನಪಿರಬಹುದು, ಗಡಿನಾಡು ಕಾಸರಗೋಡಿನಲ್ಲಿರುವಂತಹ ಕುಂಬ್ಳೆಗೆ ನನ್ನನ್ನು ಹಾಗೂ ನಿಮ್ಮನ್ನು ಅನೇಕ ಸಲ ಆಹ್ವಾನಿಸುತ್ತಿದ್ದರು. ಅದರಲ್ಲಿ ಶ್ರೀ ಕೇಶವ್ ಪ್ರಸಾದ್ ಅವರು, ಶ್ರೀ ಸುಬ್ಬಯ್ಯ ಶೆಟ್ಟಿಯವರು ಕನ್ನಡದ ಅಭಿಮಾನಿಗಳು. ಕಾಸರಗೋಡು ಜಿಲ್ಲೆಯ ಕುಂಬ್ಳೆಯಲ್ಲಿ ವಾಸವಿದ್ದಂಥವರು. ಇವತ್ತಿನ ದಿವಸ ಒಂದು ವಿಷಯ ನನಗೆ ನೆನಪಾಗುತ್ತಿದೆ. ಏನೆಂದರೆ, ಕಾಸರಗೋಡು ಕುಂಬ್ಳೆಯಲ್ಲಿ ಜನಪದ ಸಾಹಿತ್ಯದ ಉದ್ಘಾಟನೆಯನ್ನು ತಾವು ಮಾಡಿದ್ದಿರಿ, ತಮ್ಮ ಜೊತೆ ವೇದಿಕೆಯನ್ನು ನಾನೂ ಸಹ ಹಂಚಿಕೊಂಡಿದ್ದೆ.

ನಾವು ಎಷ್ಟು ಸಲ ಗಡಿನಾಡಿಗೆ ಹೋಗುತ್ತಿದ್ದೆವು ಅಷ್ಟು ಸಲ ಡಾ:ಕಯ್ಯಾರ ಕಿಂಞಣ್ಣ ರೈ ಅವರ ಬಗ್ಗೆಯೇ ಪ್ರಮುಖವಾಗಿ ಚರ್ಚೆಯಾಗುತ್ತಿತ್ತು. ಈ ಸದನದಲ್ಲಿಯೂ ಕೂಡ ಅವರ ವಿಚಾರವಾಗಿಯೇ ನಾವು ಬಹಳ ಸಂದರ್ಭದಲ್ಲಿ ಮಾತನಾಡಿದ್ದನ್ನು ನೆನಪು ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

1985ರಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರಲ್ಲದೆ, ಶ್ರೇಷ್ಠ ಅಧ್ಯಾಪಕರೆಂದು ರಾಷ್ಟ್ರ ಪ್ರಶಸ್ತಿ ಪಡೆದಂಥವರು, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ ಗೌರವ, ಮಂಗಳೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಪರಿಷತ್ ಗೌರವ ಫೆಲೋಶಿಫ್, ಪಂಪ ಪ್ರಶಸ್ತಿ, ಕರ್ನಾಟಕ ಏಕೀಕರಣ ಪ್ರಶಸ್ತಿಗಳಲ್ಲದೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಶ್ರೀಯುತರು ಭಾಜನರಾಗಿದ್ದರು. ಇವರು ಕೇರಳಕ್ಕಿಂತ ಸಾವಿರ ಪಟ್ಟು ನಮ್ಮ ಕನ್ನಡ ಜನತೆಯ ಮನೆಮಾತಾಗಿದ್ದರು. ಅಂತಹ ಒಬ್ಬ ಮಹಾನ್‌ವ್ಯಕ್ತಿ, ಸರಳ ವ್ಯಕ್ತಿ, ಶ್ರೇಷ್ಠ ಸಾಹಿತಿ, ಅತ್ಯುತ್ತಮವವಾದಂತಹ ಶಿಕ್ಷಕ ಹಾಗೂ ಅತ್ಯುತ್ತಮವಾದಂತಹ ಬರಹಗಾರರನ್ನು ನಾವು ಕಳೆದುಕೊಂಡಿದ್ದೇವೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಕರ್ನಾಟಕದ ಪ್ರಸಿದ್ಧ ವಿದ್ವಾಂಸರಾದ ಡಾ॥ಎಂ.ಎಂ.ಕಲಬುರ್ಗಿಯವರು ನಮ್ಮ ಜಿಲ್ಲೆಯವರು ಎಂದು ಬಹಳ ಹೆಮ್ಮೆಯಿಂದ ಹೇಳಬಯಸುತ್ತೇನೆ. ಇವರು ವಿಜಯಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ಗುಬ್ಬೆವಾಡ ಗ್ರಾಮದಲ್ಲಿ ಜನಿಸಿದಂಥವರು. ಇವರ ಪೂರ್ಣ ಹೆಸರು ಮಲ್ಲೇಶಪ್ಪ, ಮಡಿವಾಳಪ್ಪ ಕಲಬುರಗಿ. ಇವರು ತಮ್ಮ ಪ್ರಾಥಮಿಕ ಮತ್ತು ಕಾಲೇಜು ಶಿಕ್ಷಣವನ್ನು ನಮ್ಮ ಜಿಲ್ಲೆಯಲ್ಲಿಯೇ ಪೂರ್ಣಗೊಳಿಸಿದರು. ನಂತರ ಅವರು ಸ್ನಾತಕೋತ್ತರ ಪದವಿಯನ್ನು ಧಾರವಾಡದ ವಿಶ್ವವಿದ್ಯಾಲಯದಲ್ಲಿ ಪಡೆದರು. 1962ರಲ್ಲಿ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿಜೀವನ ಆರಂಭಿಸಿ ಅತ್ಯುತ್ತಮ ಬೋಧಕರು ಎಂದು ಹೆಸರು ಪಡೆದರು. 1966ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದ್ದಾರೆ, 1980ರಲ್ಲಿ ಅದೇ ಕನ್ನಡ ಅಧ್ಯಯನ ಪೀಠದಲ್ಲಿ ಮುಖ್ಯಸ್ಥರಾಗಿ ಕೆಲಸ ಮಾಡಿದ್ದಾರೆ. ನಂತರ 1998–2001ರ ಕಾಲಾವಧಿಯಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಉಪ ಕುಲಪತಿಗಳಾಗಿ ಅದ್ಭುತವಾಗಿ ಸೇವೆ ಸಲ್ಲಿಸಿ ಇಡೀ ನಾಡಿನ ಗಮನ ಸೆಳೆದಂಥವರು. ಅವರು ಪ್ರಗತಿಪರ ವಿಚಾರಧಾರೆಗೆ ಹೆಸರುವಾಸಿಯಾದಂತಹ ಶ್ರೀ ತೋಂಟದಾರ್ಯ ಸ್ವಾಮಿಗಳ ಮಠದಲ್ಲಿ ವೀರಶೈವ ಅಧ್ಯಯನ ಸಂಸ್ಥೆಯ ಸಂಸ್ಥಾಪಕರಾಗಿದ್ದರು. ವೀರಶೈವ ಅಧ್ಯಯನ ಪೀಠವನ್ನು ಸ್ಥಾಪನೆ ಮಾಡಿದಂತಹ ಕೀರ್ತಿಗೆ ಭಾಜನರಾಗಿದ್ದರು. ಇವರ ಮೊಟ್ಟ ಮೊದಲನೆ ಕೃತಿ ಬಸವಣ್ಣನವರ ಕುರಿತು ಶಾಸನಗಳು. ಇವರು 41 ಪ್ರಾಚೀನ ಗ್ರಂಥಗಳನ್ನು ಸಂಪಾದಿಸುವುದರ ಜೊತೆಗೆ

100 ಕೃತಿಗಳನ್ನು ರಚನೆ ಮಾಡಿದಂತಹ ಕೀರ್ತಿಗೆ ಭಾಜನರಾಗಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ ಈ ನಾಡಿನ ಪ್ರಖ್ಯಾತ ಸಂಶೋಧಕರಾದ ಇವರು ನಾಡಿನ ಸಂಸ್ಕೃತಿ ವಿಚಾರವಾಗಿ, ಇತಿಹಾಸದ ವಿಚಾರದಲ್ಲಿ, ಸಾಹಿತ್ಯದ ವಿಚಾರದಲ್ಲಿ, ಶಾಸನದಲ್ಲಿ, ಜಾನಪದದಲ್ಲಿ, ವ್ಯಾಕರಣದಲ್ಲಿ, ಕನ್ನಡ ಹಸ್ತಪ್ರತಿಯಲ್ಲಿ ಈ ರೀತಿ ಅನೇಕ ವಿಚಾರದಲ್ಲಿ ಸಂಶೋಧನೆ ಮಾಡಿದಂಥವರು, ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿಗೆ ಭಾಜನರಾಗುವುದರ ಜೊತೆಗೆ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಜಾನಪದ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ ಸೇರಿದಂತೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಶ್ರೀಯುತರು ಭಾಜನರಾಗಿದ್ದರು. ಇವರು ತಮ್ಮ ಸಂಶೋಧನೆಯ ಫಲ ಏನಿದೆ, ಅದನ್ನು ಹಿಂದು–ಮುಂದು ನೋಡದೆ ನೇರವಾಗಿ ಹೇಳುವಂತಹ ನಿಷ್ಠೂರವಾದಿಗಳು. ಬಹುಶಃ ಇದೇ ಕಾರಣಕ್ಕೆ ವಿರೋಧಿಗಳು ಹುಟ್ಟುಕೊಂಡಿದ್ದರು. ಆದರೆ ಇವರ ಹತ್ಯೆಯನ್ನು ನಾವು ಬಹಳ ಉಗ್ರವಾಗಿ ಖಂಡಿಸಬೇಕಾಗುತ್ತದೆ. ನನ್ನ ದೃಷ್ಟಿಯಲ್ಲಿ ಇದು ಅತ್ಯಂತ ಹೇಯಕೃತ್ಯ ಎಂದು ಹೇಳಬಯಸುತ್ತೇನೆ. ಅಷ್ಟೇ ಅಲ್ಲದೆ ನಿಷ್ಠೂರತೆಯ ಪ್ರಾಮಾಣಿಕತೆಯ ಸಂಶೋಧನೆ ಮೇಲೆ ನಡೆದಂತಹ ಒಂದು ದಬ್ಬಾಳಿಕೆ, ದೌರ್ಜನ್ಯ ಎಂದು ಹೇಳುವುದರ ಜೊತೆಗೆ ಮಾನವೀಯತೆಯ ಮೇಲೆ ನಡೆದಂತಹ ಒಂದು ದೊಡ್ಡದಾದಂತಹ ಹತ್ಯೆ ಎಂದು ಹೇಳಬಯಸುತ್ತೇನೆ. ಬಹುತೇಕವಾಗಿ ಅಸಹಿಷ್ಣುತೆಗೆ ಇದು ಒಂದು ಕಾರಣವೆಂದರೂ ತಪ್ಪಾಗಲಾರದು ಎಂದು ಹೇಳುವುದಕ್ಕೆ ಇದೊಂದು ಜೀವಂತ ನಿದರ್ಶನವೆಂದು ಹೇಳಬಯಸುತ್ತೇನೆ.

ನಿನ್ನೆಯ ದಿವಸ ನಾನು ಪತ್ರಿಕೆಯಲ್ಲಿ ನೋಡಿದೆ, ಡಾ:ಎಂ.ಎಂ. ಕಲಬುರ್ಗಿಯವರ ಬರ್ಬರ ಹತ್ಯೆಯ ವಿಚಾರವಾಗಿ ಖ್ಯಾತ ಸಾಹಿತಿಗಳಾದಂತಹ ದೇವನೂರು ಮಹದೇವನವರು ಕೇಂದ್ರ ಸಾಹಿತ್ಯ ಅಕಾಡಮಿಯ ಪ್ರಶಸ್ತಿ ಮತ್ತು ಪದ್ಮಶ್ರೀ ಪ್ರಶಸ್ತಿಯನ್ನು ವಾಪಸ್ಸು ಕೊಟ್ಟಂತಹ ವಿಚಾರವನ್ನು ಪತ್ರಿಕೆಯಲ್ಲಿ ಓದಿದೆ. ಬಹುತೇಕವಾಗಿ ನಮ್ಮ ಸರ್ಕಾರ ಈ ದಿಶೆಯಲ್ಲಿ ಬಹಳಷ್ಟು ಬೇಗನೆ ತಪ್ಪಿತಸ್ಥರನ್ನು ಕಂಡುಹಿಡಿಯುವಂತಹ ದಿಶೆಯಲ್ಲಿ ನಾವು ಕಾರ್ಯೋನ್ಮುಖರಾಗಿದ್ದೇವೆ. ಸರ್ಕಾರ ಆ ದಿಶೆಯಲ್ಲಿ ನಿಶ್ಚಿತವಾಗಿ ಆದಷ್ಟು ಬೇಗನೆ ಅವರ ಹತ್ಯೆಯಲ್ಲಿ ಯಾರು ಭಾಗಿಯಾಗಿದ್ದಾರೆ, ಆ ಕುಕೃತ್ಯದಲ್ಲಿ ಯಾರು ಭಾಗಿಯಾಗಿದ್ದಾರೆ, ಬರ್ಬರ ಹತ್ಯೆಯಲ್ಲಿ ಯಾರು ಭಾಗಿಯಾಗಿದ್ದಾರೆ ಅವರನ್ನು ಕಂಡುಹಿಡಿಯುವುದಕ್ಕೆ ನಾವು ನಿಶ್ಚಿತವಾಗಿ ಆ ದಿಶೆಯಲ್ಲಿ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳಿ, ನಮ್ಮ ನಾಡಿನ ಅತ್ಯಂತ ಹಿರಿಯ ಸಾಹಿತಿ, ಶ್ರೇಷ್ಠ ಸಂಶೋಧಕರನ್ನು ಕಳೆದುಕೊಂಡಿದ್ದೇವೆಂದು ಹೇಳಬಯಸುತ್ತೇನೆ.

ಶ್ರೀ ಕೆ.ಎಸ್.ಎಲ್.ಸ್ವಾಮಿಯವರು ಕನ್ನಡ ಚಿತ್ರರಂಗದ ಹಿರಿಯ ನಿರ್ದೇಶಕ ಹಾಗೂ ಕಲಾವಿದ. ಇವರ ನಿಕ್‌ನೇಮ್ 'ರವಿ' ಎಂದು ಕರೆಯುತ್ತಿದ್ದರು. ಇವರು ಬಹುಮುಖ ಪ್ರತಿಭೆ ಹೊಂದಿದಂಥವರು.

ಇವರು ನಿರ್ದೇಶಕರಾಗಿ, ನಿರ್ಮಾಪಕರಾಗಿ, ಚಿತ್ರಕಥೆ, ಸಂಗೀತ ರಚನೆ, ನಟನೆ, ಹಿನ್ನಲೆ ಗಾಯನ, ಈ ರೀತಿ ಸಿನಿಮಾದ ಎಲ್ಲಾ ಮಗ್ಗುಲುಗಳಲ್ಲಿಯೂ ಸೈ ಎನ್ನಿಸಿಕೊಂಡಂಥಹ ವ್ಯಕ್ತಿ. ಸಿನಿಮಾದ ಎಲ್ಲಾ ಮಗ್ಗುಲುಗಳಲ್ಲಿಯೂ ಕೂಡ ಕೃಷಿ ಮಾಡಿದಂಥವರು. ಅವರು 50 ವರ್ಷ ತಮ್ಮ ವೃತ್ತಿ ಬದುಕಿನಲ್ಲಿದ್ದವರು. ಅಂದರೆ 5 ದಶಕಗಳ ಕಾಲ. 35ಕ್ಕೂ ಹೆಚ್ಚು ಚಿತ್ರಗಳಿಗೆ ನಿರ್ದೇಶನ ಮಾಡಿದಂತಹ ಖ್ಯಾತಿಗೆ ಪಾತ್ರರಾದಂಥವರು. ಅವರಲ್ಲಿ ಇದ್ದಂತಹ ಇನ್ನೊಂದು ವಿಶೇಷತೆ ಎಂದರೆ, ಅವರ ಚಿತ್ರಗಳಲ್ಲಿ ಸಮಾಜಕ್ಕೆ ಒಂದು ಉತ್ತಮ ಸಂದೇಶವಿರುತ್ತಿತ್ತು. ಅವರ ಬಹಳಷ್ಟು ಚಿತ್ರಗಳನ್ನು ನಾನೂ ಸಹ ನೋಡಿದ್ದೇನೆ. ಅವರ ಚಿತ್ರಗಳಲ್ಲಿ ವಿಶೇಷವಾಗಿ ಯುವ ಜನಾಂಗಕ್ಕೆ ಒಂದು ಸಂದೇಶ ಕೊಡುವಂತಹ ಕೆಲಸವನ್ನು ಶ್ರೀ ಕೆ.ಎಸ್.ಎಲ್. ರವಿಯವರು ಮಾಡುತ್ತಿದ್ದರು. ಅದರ ಜೊತೆಗೆ ಪೌರಾಣಿಕ ಚಿತ್ರಗಳನ್ನು ಸಹ ನಿರ್ಮಿಸಿದ್ದರು. ಇವರ ಚಿತ್ರಗಳಲ್ಲಿ ಬಹಳ ಪ್ರಮುಖವಾದವು ಎಂದರೆ, 1964ರಲ್ಲಿ 'ಪೋಸ್ಟ್ ಮಾಸ್ಟರ್' ಚಿತ್ರ, ಅದೇ ರೀತಿ 'ತೂಗುದೀಪ, ಭಾಗ್ಯದ ಬಾಗಿಲು, ಮಂಕುದಿಣ್ಣೆ, ಅಣ್ಣತಮ್ಮ, ಅರಿಶಿನ–ಕುಂಕುಮ, ಲಕ್ಷ್ಮಿ–ಸರಸ್ವತಿ, ದೇವರು ಕೊಟ್ಟ ತಂಗಿ, ಕುಳ್ಳ ಏಜೆಂಟ್ 000, ಭಾಗ್ಯಜ್ಯೋತಿ, ಮಕ್ಕಳ ಭಾಗ್ಯ, ತುಳಸಿ, ದೇವರ ದುಡ್ಡು, ಮಾಗಿಯ ಕನಸು, ಜಿಮ್ಮಿಗಲ್ಲು, ಕ್ರಾಂತಿಯೋಗಿ ಬಸವಣ್ಣ, ಜಂಬೂಸವಾರಿ' ಈ ರೀತಿ ಬಹಳಷ್ಟು ಚಿತ್ರಗಳನ್ನು ನಿರ್ಮಿಸಿದಂತಹ ಕೀರ್ತಿಗೆ ಇವರು ಪಾತ್ರರಾಗಿದ್ದಾರೆ ಎಂಬ ಮಾತನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುವುದಕ್ಕೆ ಇಷ್ಟಪಡುತ್ತೇನೆ.

(1–00 ಗಂಟೆ)

ಇವರ ಅಗಲುವಿಕೆಯಿಂದ ನಿಜವಾಗಿಯೂ ಚಲನಚಿತ್ರ ರಂಗ ಅತ್ಯುತ್ತಮವಾದ ನಿರ್ದೇಶಕ ಹಾಗೂ ನಿರ್ಮಾಪಕರನ್ನು ಕಳೆದುಕೊಂಡಿದೆ ಎನ್ನುವಂತಹ ಮಾತನ್ನು ಹೇಳಬಯಸುತ್ತೇನೆ. ಇವತ್ತು ನಮ್ಮನ್ನು ಅಗಲಿರುವ ಇವರೆಲ್ಲರೂ ಸಹ ಸಾರ್ಥಕ ಬದುಕನ್ನು ಬದುಕಿದಂತಹವರು. ಹುಟ್ಟು ಸಾವಿನ ಮಧ್ಯ ಅಗಾಧವಾದ ಸಾಧನೆಯನ್ನು ಮಾಡಿರುವವರು. ಇವತ್ತು ಅವರು ನಮ್ಮ ಮಧ್ಯದಲ್ಲಿ ಇರುವುದಿಲ್ಲ. ಆದರೆ ಅವರು ಈ ಸಮಾಜಕ್ಕೆ, ನಾಡಿಗೆ, ನುಡಿಗೆ, ಮತ್ತು ರಾಷ್ಟ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿರುವ ಕಾರಣ ಅವರಿನ್ನೂ ನಮ್ಮ ಮಧ್ಯದಲ್ಲಿ ಜೀವಂತವಾಗಿದ್ದಾರೆ ಎನ್ನುವ ಭಾವನೆ ನಮ್ಮಲ್ಲಿದೆ. ಬಹಳಷ್ಟು ಜನರು ನಮ್ಮ ಪಕ್ಕದಲ್ಲಿಯೇ ಇರುತ್ತಾರೆ, ಆದರೆ ಅವರು ಇದ್ದು ಇಲ್ಲದ ಹಾಗೆ ಇರುತ್ತಾರೆ. ಹಾಗೆಯೇ ಎಷ್ಟೋ ಜನರು ನಮ್ಮನ್ನು ಅಗಲಿ ಹೋಗಿದ್ದಾರೆ. ಅವರ ನೆನಪು ಯಾರಿಗೂ ಇಲ್ಲ, ಅವರ ಮೊಮ್ಮಕ್ಕಳಿಗೆ ನೆನಪು ಇರುವುದಿಲ್ಲ. ಅಂದರೆ ಇದ್ದೂ ಸತ್ತ ಹಾಗೆ. ಆದರೆ ಇವರು ನಮ್ಮ ಮಧ್ಯದಲ್ಲಿ ಇಲ್ಲದಿದ್ದರೂ ಸಹ ತಮ್ಮ ಬದುಕಿನ ಮುಖಾಂತರ ನಾಡು ನುಡಿಗೆ ತಮ್ಮದೇ ಆದ ಕೊಡುಗೆ

ಮುಖಾಂತರ ಸಾರ್ಥಕ ಬದುಕನ್ನು ಬದುಕಿದಂತಹವರು, ಇಂತಹವರ ಅಗಲುವಿಕೆ ನಿಜವಾಗಿಯೂ ಎಲ್ಲಾ ಕ್ಷೇತ್ರಕ್ಕೂ ಕೂಡ ಬಹಳ ಹಾನಿ. ಅದರಲ್ಲಿ ವಿಶೇಷವಾಗಿ ಕನ್ನಡ ನಾಡಿಗೆ ಬಹಳಷ್ಟು ದೊಡ್ಡ ಹಾನಿ.

ಇಂತಹ ಸಾರ್ಥಕ ಬದುಕನ್ನು ಬದುಕಿದ ಹಿರಿಯ ಚೇತನಗಳನ್ನು ಕಳೆದುಕೊಂಡು ಇವತ್ತು ನಾವೆಲ್ಲರೂ ದುಃಖದಲ್ಲಿದ್ದೇವೆ ಎನ್ನುವ ಮಾತನ್ನು ಹೇಳಿ, ಮೃತರ ಆತ್ಮಕ್ಕೆ ಆ ಭಗವಂತ ಶಾಂತಿಯನ್ನು ಕಲ್ಪಿಸಿ ಇಂತಹ ಹಿರಿಯ ಚೇತನಗಳ ಅಗಲುವಿಕೆಯ ನೋವನ್ನು ಸಹಿಸುವಂತಹ ಶಕ್ತಿಯನ್ನು ಆ ಭಗವಂತನು ಅವರ ಹಿತೈಷಿಗಳಿಗೆ, ಅಭಿಮಾನಿಗಳಿಗೆ ಮತ್ತು ಕುಟುಂಬವರ್ಗದವರಿಗೆ ಮತ್ತು ನಮ್ಮೆಲ್ಲರಿಗೂ ನೀಡಲಿ ಎನ್ನುವುದರ ಜೊತೆಗೆ ಅವರ ಅಪೂರ್ಣವಾದ ಕನಸುಗಳನ್ನು ಏನು ಬಿಟ್ಟು ಹೋಗಿದ್ದಾರೆ, ಅವುಗಳನ್ನು ಪೂರ್ತಿ ಮಾಡುವತ್ತ, ಅವರ ಹೆಜ್ಜೆ ಗುರುತುಗಳನ್ನು ಅನುಸರಿಸಿ ದಾಪುಗಾಲು ಹಾಕಿದರೆ ನಿಶ್ಚಿತವಾಗಿ ಅವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಿದಂತಾಗುತ್ತದೆ ಎನ್ನುವ ಮಾತನ್ನು ಹೇಳಿ, ಮತ್ತೊಮ್ಮೆ ತಮಗೆ ವಂದನೆಗಳನ್ನು ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೇ, ಅನೇಕ ಹಿರಿಯ ಚೇತನಗಳು ಇವತ್ತು ನಮ್ಮ ಜೊತೆಯಲ್ಲಿ ಇಲ್ಲ. ವಿಧಾನಸಭೆ ಹಾಲಿ ನಾಯಕರಾದ ಶ್ರೀಮಾನ್ ವೆಂಕಟೇಶ್ ನಾಯಕ್‌ರವರು, ಮಾಜಿ ಸಚಿವರಾದ ಎಂ. ಮಹಾದೇವ್‌ರವರು, ಡಾ॥ಎಂ.ಎಂ.ಕಲ್ಬುರ್ಗಿಯವರು, ಡಾ॥ಕೆ.ಎಸ್.ಎಲ್.ಸ್ವಾಮಿಯವರು ಇವರೆಲ್ಲರೂ ಕೂಡ ನಮ್ಮನ್ನು ಅಗಲಿದಂತಹ ಸಂದರ್ಭದಲ್ಲಿ ನಾವೆಲ್ಲರೂ ಸಹ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಿದ್ದೇವೆ. ವೆಂಕಟೇಶ್ ನಾಯಕ್‌ರವರಿಗೆ ಬಂದಂತಹ ಸಾವು ನಿಜಕ್ಕೂ ಸಹ ಯಾವುದೇ ವ್ಯಕ್ತಿಗೆ ಬರಬಾರದು. ಏಕೆಂದರೆ ಬೆಂಗಳೂರಿನಿಂದ ರೈಲಿನಲ್ಲಿ ಹೋಗುವಂತಹ ಸಂದರ್ಭದಲ್ಲಿ ಆದಂತಹ ಒಂದು ಅಪಘಾತವನ್ನು ಟಿವಿಯಲ್ಲಿ ನಾನು ನೋಡಿದೆನು. ಅದಾದ ನಂತರ ಟಿವಿಯಲ್ಲಿ ವೆಂಕಟೇಶ್ ನಾಯಕ್‌ರವರು ತೀರಿ ಹೋದರು ಎನ್ನುವ ವಿಚಾರ ಬಂತು. ಆದರೆ ಅವರ ಬಾಡಿ ಸಿಗಲಿಲ್ಲ. ಅವರ ಊರಿಗೆ ಅದನ್ನು ಸಾಗಿಸಬೇಕಾದರೆ ಎಷ್ಟರಮಟ್ಟಿಗೆ ಆ ಶರೀರ ಛಿದ್ರವಾಗಿತ್ತು ಎನ್ನುವುದನ್ನು ನೋಡಿದರೆ ಒಂದು ಚೀಲದಲ್ಲಿ ಕಟ್ಟಿದ ಹಾಗೆ ಮಾಡಿ, ಅದರ ಮೇಲೆ **'ವೆಂಕಟೇಶ್ ನಾಯಕ್'** ಎಂದು ಅವರ ಹೆಸರನ್ನು ಬರೆದಿದ್ದರು. ಇಂತಹ ಒಂದು ಸಾವು ಯಾರಿಗೂ ಬರಬಾರದು ವೆಂಕಟೇಶ್ ನಾಯಕ್ ರವರು ಈಗ ಇಲ್ಲದಿದ್ದರು ಸಹ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿದ್ದಾರೆ. ನಾನು ರಾಯಚೂರಿಗೆ ಹೋದಾಗಲೆಲ್ಲ ಅವರ ಬಗ್ಗೆ ಕೇಳಿದ್ದೇನೆ. ಮಾನ್ಯ ಸಭಾನಾಯಕರು ಹೇಳಿದ ಹಾಗೆ ಸರಳ ಸಜ್ಜನಿಕೆಯ ವ್ಯಕ್ತಿ. ಎಲ್ಲಾ ಪಕ್ಷಗಳ ಜೊತೆಯಲ್ಲಿಯೂ ಸಹ ಸಂತೋಷದಿಂದ ಸ್ನೇಹವನ್ನು ಪಡೆದಿದ್ದಂತಹ ವ್ಯಕ್ತಿ. ಇಂತಹ ವ್ಯಕ್ತಿಯನ್ನು ಇವತ್ತು ಕಳೆದುಕೊಂಡಿರುವುದು, ನಿಜಕ್ಕೂ ಸಹ ದುರ್ದೈವದ ಸಂಗತಿ ಎಂದು ನಾನು ಭಾವಿಸುತ್ತೇನೆ.

ಶ್ರೀಯುತ ಎಂ.ಮಹಾದೇವ್‌ರವರು ನೇರ ನಡೆ, ನುಡಿ ಮತ್ತು ನಿಷ್ಠೂರತೆಗೆ ಹೆಸರಾದವರು ಎಂದು ತಾವು ಈಗಾಗಲೇ ಹೇಳಿದ್ದೀರಿ. ಇದು ಎಷ್ಟರಮಟ್ಟಿಗೆ ಎಂದರೆ, 'ಎಂ.ಮಹಾದೇವ್' ಎಂದರೆ ಯಾರಿಗೂ ಗೊತ್ತಾಗುತ್ತಾ ಇರಲಿಲ್ಲ. 'ಬೆಂಕಿ ಮಹಾದೇವ್' ಎಂದೇ ಜನರು ಅವರನ್ನು ಗುರುತಿಸಿದ್ದರು. ಅವರು ಬಾಯಿ ಬಿಟ್ಟರೆ ಬೆಂಕಿ ಉಗುಳಿದಂತೆ ಆಗುತ್ತಿತ್ತು. ಅಷ್ಟು ನಿಷ್ಠೂರವಾದಿ. ಅವರು ನಮ್ಮ ಭಾರತೀಯ ಜನತಾ ಪಕ್ಷಕ್ಕೆ ಬರುವಂತಹ ಸಂದರ್ಭದಲ್ಲಿ ಸಾಕಷ್ಟು ಚರ್ಚೆ ನಡೆಯಿತು. ನಾನು ಸಹ ಅವರ ಮನೆಗೆ ಹೋಗಿದ್ದೆನು. ಆ ಸಂದರ್ಭದಲ್ಲಿ "ನಿಮ್ಮ ನಿಷ್ಠೂರತೆಗೆ ಇಲ್ಲಿ ವ್ಯವಸ್ಥೆ ಹೊಂದಾಣಿಕೆ ಆಗುತ್ತದೆಯೇ" ಎಂದು ನಾನು ಕೇಳಿದೆನು. ಅದಕ್ಕವರು 'ಆಗುತ್ತೆ, ನಾನು ಖಂಡಿತ ಬರುತ್ತೇನೆ' ಎನ್ನುವ ಮಾತನ್ನು ಹೇಳಿದ್ದರು. ನಾನು ಸೆಂಟ್ರಲ್ ಸಿಲ್ಕ್ ಬೋರ್ಡ್ ಛೇರ್ಮನ್ ಆಗಿದ್ದಂತಹ ಸಂದರ್ಭದಲ್ಲಿ ಅವರು ರೇಷ್ಮೆ ಇಲಾಖೆಯ ಮಂತ್ರಿಗಳಾಗಿದ್ದರು. ಹಾಗಾಗಿ ಅವರ ಜೊತೆಯಲ್ಲಿ ನನಗೆ ವೈಯುಕ್ತಿಕವಾದ ಸ್ನೇಹ ಇತ್ತು. ಆದರೆ ಬಹಳ ನಿಷ್ಠೂರವಾದಿ. ಅಂತಹ ಒಬ್ಬ ವ್ಯಕ್ತಿಯನ್ನು ಕಳೆದುಕೊಂಡಿರುವುದು ನಿಜಕ್ಕೂ ಕೂಡ ತುಂಬಾ ಅನ್ಯಾಯ ಎಂದು ನೆನಪು ಮಾಡಿಕೊಳ್ಳುತ್ತೇನೆ.

ಡಾ: ಕಯ್ಯಾರ ಕಿಂಞಣ್ಣ ರೈ ರವರ ಹೆಸರು ಕೇಳುತ್ತಿದ್ದ ಹಾಗೆ ಇಡೀ ರಾಜ್ಯಕ್ಕೆ ನೆನಪಿಗೆ ಬರುವುದು ಕಾಸರಗೋಡು. ಕಾಸರಗೋಡು ಕರ್ನಾಟಕಕ್ಕೆ ಸೇರಬೇಕೆಂದು ಹೋರಾಟ ಮಾಡಿದಂತಹ ಒಬ್ಬ ಮಹಾಪುರುಷನನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಹಾಗೆಯೇ ಮಹಾಜನ್ ವರದಿಯನ್ನು ಸಂಪೂರ್ಣವಾಗಿ ಜಾರಿಗೆ ತರಬೇಕೆಂದು ಹೋರಾಟವನ್ನು ಮಾಡಿದ್ದರು. ಏಕೆಂದರೆ ಕರ್ನಾಟಕದ ಗಡಿ ಭಾಗದಲ್ಲಿರುವ ಬೆಳಗಾವಿ ಹಾಗೂ ಕಾಸರಗೋಡಿನಂತಹ ಗಡಿ ಪ್ರದೇಶದ ಸಮಸ್ಯೆಗಳಿಗೆ ಇನ್ನು ಪರಿಹಾರ ಇಲ್ಲದಿರುವುದಕ್ಕೆ ಕಾರಣವೇ ಈ ಎಲ್ಲಾ ಹಿರಿಯರು ಅಪೇಕ್ಷೆ ಪಟ್ಟ ಹಾಗೆ ಮಹಾಜನ್ ವರದಿ ಜಾರಿಗೆ ಬಂದಿಲ್ಲದಿರುವುದು. ಅದು ಜಾರಿಗೆ ಬಂದರೆ ರಾಜ್ಯಕ್ಕೆ ಅನುಕೂಲ ಆಗುವುದಲ್ಲದೇ ಈ ರೀತಿ ಹೋರಾಟ ಮಾಡಿದಂತಹ ಹಿರಿಯರ ಆತ್ಮಗಳಿಗೂ ಸಹ ಶಾಂತಿ ದೊರೆಯುತ್ತದೆ. ಇವರು ಒಂದು ಕಡೆ ಕನ್ನಡದ ಕಂಪು, ಮತ್ತೊಂದು ಕಡೆಯಲ್ಲಿ ಮಲೆಯಾಳಿ ಸಾಹಿತ್ಯದ ಬಗ್ಗೆ ಆಸಕ್ತಿಯನ್ನು ಹೊಂದಿದ್ದರು. ಕುವೆಂಪುರವರು ಹೇಗೆ "ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ" ಎಂದಿರುವ ಹಾಗೆ ಡಾ: ಕಯ್ಯಾರ ಕಿಂಞಣ್ಣ ರೈ ರವರು ಸಹ ಕರ್ನಾಟಕದ ಬಗ್ಗೆ ಪ್ರೀತಿಯನ್ನು ಇಟ್ಟುಕೊಂಡು ಮಲೆಯಾಳಿ ಸಾಹಿತ್ಯದ ಬಗ್ಗೆ ಕೂಡ ಆಸಕ್ತಿಯನ್ನು ಹೊಂದಿದ್ದ ಮಹಾಪುರುಷ ಎಂದರೆ ತಪ್ಪಾಗುವುದಿಲ್ಲ.

ಡಾ॥ ಎಂ.ಎಂ. ಕಲ್ಬುರ್ಗಿಯವರು ಕನ್ನಡ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಸಂದರ್ಭದಲ್ಲಿ ಶಿವಮೊಗ್ಗ ನಗರದಲ್ಲಿನ 'ಶ್ರೀಗಂಧ' ಎನ್ನುವ ಒಂದು ಸಾಂಸ್ಕೃತಿಕ ಸಂಸ್ಥೆಗೆ. ಅವರನ್ನು ನಾವು ಕರೆಸಿದ್ದೆವು. ಆ ಸಂದರ್ಭದಲ್ಲಿ ಅವರ ಮಾತುಗಳನ್ನು ಕೇಳಿ ನಾವು ತುಂಬಾ ಪ್ರಭಾವಿತರಾಗಿದ್ದೆವು.

ಇಂತಹ ಒಬ್ಬ ವ್ಯಕ್ತಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಇದ್ದಾರೆಂದು ನಮಗೆ ಸಂತೋಷವಾಗಿತ್ತು. ಆದರೆ ಅವರ ಹತ್ಯೆ ಆದ ತಕ್ಷಣ ನನಗೆ ಇವತ್ತಿಗೂ ನೋವನ್ನು ಉಂಟು ಮಾಡುತ್ತಿರುವ ವಿಚಾರ ಏನೆಂದರೆ, ಕೊಲೆ ಮಾಡಿದಂತಹ ವ್ಯಕ್ತಿಗಳನ್ನು ರಾಜ್ಯ ಸರ್ಕಾರ ಇನ್ನೂ ಹಿಡಿಯದೇ ಇರುವುದು. ಇದು ಸರ್ಕಾರದ ಒಂದು ಇಂಟಲಿಜೆನ್ಸ್ ಫೆಲ್ಯೂರ್ ಎನ್ನಬೇಕೋ ಅಥವಾ ಅವರ ಕೊಲೆಗಡುಕರನ್ನು ಹಿಡಿಯದೇ ಇರವಂತಹ ಅಸಹಾಯಕತೆಯೋ ಏನೋ ನನಗಂತೂ ಅರ್ಥವಾಗುತ್ತಿಲ್ಲ. ತಿಂಗಳುಗಳು ಕಳೆದಿವೆ. ಅವರು ಹತ್ಯೆಯಾದ ಸಂದರ್ಭದಲ್ಲಿ "ವೀರಶೈವ ಸಮಾಜದ ಒಬ್ಬ ಚಿಂತಕರನ್ನು ನಾವು ಕಳೆದುಕೊಂಡೆವು" ಎನ್ನುವ ಮಾತನ್ನು ಸಭಾನಾಯಕರು ಹೇಳಿದರು. ಇದು ಅಷ್ಟೆ ಅಲ್ಲ; ಅವರು ಒಂದು ಸಮಾಜದ ವ್ಯಕ್ತಿಯಲ್ಲ, ಕಲ್ಬುರ್ಗಿಯವರು ಇಡೀ ದೇಶಕ್ಕೆ ಬೇಕಾದಂತಹ ಒಬ್ಬ ವ್ಯಕ್ತಿ. ಅಂತಹ ಒಬ್ಬ ಸಂಶೋಧಕರನ್ನು ನಾವು ಕಳೆದುಕೊಂಡ ನಂತರ ಈಗ ಆ ಬಗ್ಗೆ ಅನೇಕ ಬಣ್ಣಗಳು ಹೊರಬರುತ್ತಿವೆ. ಈಗ ಕೆಲವರು ತಮಗೆ ಬಂದಂತಹ ಪ್ರಶಸ್ತಿಗಳನ್ನು ವಾಪಸ್ಸು ಮಾಡುತ್ತಿದ್ದಾರೆ. ಇದು ಸರ್ಕಾರ ಕೊಲೆಗಡುಕರನ್ನು ಹಿಡಿಯದೇ ಇರುವ ಬಗ್ಗೆ ಇರುವ ಅಸಮಾದಾನವೋ ಅಥವಾ ಅವರು ಒಬ್ಬ ಪ್ರಗತಿಪರ ಚಿಂತಕರು, ಇಂತಹ ಪ್ರಗತಿಪರ ಚಿಂತನೆಯನ್ನು ವಿರೋಧ ಮಾಡುತ್ತಿದ್ದವರು ಕೊಲೆ ಮಾಡಿದರು ಎನ್ನುವ ಕಾರಣಕ್ಕೋ ಎನ್ನುವುದು ನನಗಂತೂ ಅರ್ಥವಾಗುತ್ತಿಲ್ಲ. ಅವರ ಸಾವು ಯಾವ ರೂಪದಲ್ಲಿ ಆಗಿದೆ ಎನ್ನುವುದನ್ನು ತಿಳಿಯಬೇಕಾದರೆ ಕೊಲೆಗಡುಕರನ್ನು ಅರೆಸ್ಟ್ ಮಾಡಬೇಕು. ಅರೆಸ್ಟ್ ಮಾಡಿದಲ್ಲಿ ಕಲ್ಬುರ್ಗಿಯವರಿಗೆ ಮಾತ್ರವಲ್ಲ ಇಡೀ ಸಮಾಜಕ್ಕೆ ಈ ಸರ್ಕಾರ ಕೊಲೆಗಡುಕರನ್ನು ಎಂದಿಗೂ ಕ್ಷಮಿಸುವುದಿಲ್ಲ ಎನ್ನುವ ಸಂದೇಶ ಹೋಗುತ್ತದೆ. ಇಲ್ಲ ಎಂದರೆ ಯಾರು ಏನು ಬೇಕಾದರೂ ಊಹೆಯನ್ನು ಮಾಡಬಹುದು. ಕಲ್ಬುರ್ಗಿಯವರನ್ನು ಅವರ ವಿಚಾರವಾದಕ್ಕೆ ಹತ್ಯೆ ಮಾಡಲಾಗಿದೆ, ಇದೊಂದು ವೈಚಾರಿಕತೆಯ ಕಗ್ಗೊಲೆ ಎಂದು ಸುಲಭವಾಗಿ ಹೇಳಬಹುದು. ಮಾನ್ಯ ಪರಮೇಶ್ವರ್‌ರವರು ಗೃಹ ಸಚಿವರಾಗಿ ಬಂದಂತಹ ಸಂದರ್ಭದಲ್ಲಿ ಇದನ್ನು ಸವಾಲಿನ ರೂಪದಲ್ಲಿ ಸ್ವೀಕರಿಸಿ, ಯಾರು ಕಲ್ಬುರ್ಗಿಯವರನ್ನು ಹತ್ಯೆ ಮಾಡಿದ್ದಾರೋ, ಅವರನ್ನು ಹಿಡಿಯುವ ನಿಟ್ಟಿನಲ್ಲಿ ಏನೇನು ಪ್ರಯತ್ನಗಳು ಬೇಕೋ ಅದನ್ನೆಲ್ಲ ಮಾಡಬೇಕೆಂದು ವಿನಂತಿಸಿದ್ದೆನು ಇಡೀ ಕರ್ನಾಟಕ ರಾಜ್ಯ ಸರ್ಕಾರದ ಜೊತೆಯಲ್ಲಿ ಇರುತ್ತದೆ. ಇಡೀ ದೇಶವೇ ಸರ್ಕಾರದ ಜೊತೆ ಇರುತ್ತದೆ. ಏಕೆಂದರೆ ವೈಚಾರಿಕ ವ್ಯಕ್ತಿತ್ವ ಹೊಂದಿರುವ ವ್ಯಕ್ತಿಗಳನ್ನು ಕೊಲೆ ಮಾಡುವವರು ಹೇಡಿಗಳು. ವಿಷಯವನ್ನು ಚರ್ಚಿಸುವ ಮೂಲಕ ಪರಿಹರಿಸಬೇಕೇ ವಿನಃ ವ್ಯಕ್ತಿಗಳನ್ನು ಕೊಲೆ ಮಾಡುವುದರಿಂದ ಯಾವುದೇ ವಿಚಾರಗಳು ಸಾಯುವುದಿಲ್ಲ. ಪಂಡಿತ್ ದೀನ್ ದಯಾಳ್‌ರವರು ಕೊಲೆಯಾದ ಸಂದರ್ಭದಲ್ಲಿಯೂ ಕೂಡ ನಾನು ಇದೇ ವಿಚಾರವನ್ನು ಹೇಳಿದ್ದೆನು. ವ್ಯಕ್ತಿಗಳನ್ನು ಕೊಲೆ ಮಾಡಬಹುದು, ಆದರೆ ವ್ಯಕ್ತಿಗಳ ವಿಚಾರಗಳನ್ನು ಕೊಲೆ ಮಾಡುವುದಕ್ಕೆ ಸಾಧ್ಯವಿಲ್ಲ. ಇವತ್ತು ಇವರ ಹತ್ಯೆಯ ವಿಚಾರವನ್ನು ಕರ್ನಾಟಕ ಮಾತ್ರವಲ್ಲದೇ ಇಡೀ ದೇಶ ನೋಡುತ್ತಿರುವ

ಸಂದರ್ಭದಲ್ಲಿ ಕಲ್ಬುರ್ಗಿಯವರನ್ನು ಹತ್ಯೆ ಮಾಡಿರುವವರನ್ನು ಹಿಡಿಯುವ ನಿಟ್ಟಿನಲ್ಲಿ ಮಾನ್ಯ ಗೃಹ ಸಚಿವರು ಪೂರ್ಣ ಆಸಕ್ತಿಯನ್ನು ವಹಿಸಬೇಕು. ನಾವೆಲ್ಲರೂ ಸಹ ಅವರಿಗೆ ಪೂರ್ಣ ಸಹಕಾರವನ್ನು ನೀಡುತ್ತೇವೆ. ಆದ್ದರಿಂದ ಈ ರೀತಿ ಕೊಲೆ ಮಾಡಿರುವವರನ್ನು ಹಿಡಿಯುವ ನಿಟ್ಟಿನಲ್ಲಿ ಸರ್ಕಾರ ಸಂಪೂರ್ಣವಾದ ಗಮನ ಹರಿಸಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎಸ್.ಎಲ್ ಸ್ವಾಮಿಯವರು ಒಂದು ಸಂಸ್ಕೃತ ಚಿತ್ರವನ್ನು ನಿರ್ಮಾಣ ಮಾಡಬೇಕೆಂದು ನಮ್ಮೆಲ್ಲರ ಸಹಕಾರ ಕೋರಿಕೊಂಡು ನಮ್ಮ ಮನೆಗೆ ಬಂದಿದ್ದರು. ಆ ದಿಕ್ಕಿನಲ್ಲಿ ಸಾಕಷ್ಟು ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿಯೇ ಅವರು ನಮ್ಮ ಜೊತೆಗಿಲ್ಲದಂತಾದರು.

ಚಿತ್ರರಂಗದಲ್ಲಿ ಅವರು ಮಾಡಿದಂತಹ ಪ್ರಯತ್ನ ನಿಜಕ್ಕೂ ಮೆಚ್ಚುವಂಥದ್ದು. ಅವರ ಕೈಯಲ್ಲಿ ಹಣ ಇದ್ದರೆ ಇನ್ನು ಏನೇನು ಸಾಧನೆ ಮಾಡುತ್ತಿದ್ದರೋ ಗೊತ್ತಿಲ್ಲ. ಚಿತ್ರರಂಗದ ಅನೇಕ ನಟರು ನಟನೆ ಮಾಡುವಾಗ ದೊಡ್ಡ ಹೀರೊ ತರಹ ಕಾಣುತ್ತಾರೆ. ಆದರೆ ಅವರ ವೈಯಕ್ತಿಕ ಜೀವನವನ್ನು ನೋಡಿದಾಗ ಅವರ ಪರಿಸ್ಥಿತಿ ಎಂಥದ್ದು ಎಂದು ಗೊತ್ತಾಗುತ್ತದೆ. ಮಾನ್ಯ ಸ್ವಾಮಿಯವರನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೇನೆ. ಅವರು ಬಹಳ ತೊಂದರೆಯಲ್ಲಿ ಇದ್ದರು. ಚಿತ್ರರಂಗದಲ್ಲಿ ಇದ್ದು ಸಾವನ್ನಪ್ಪಿದಂತಹ ಪ್ರತಿಭಾವಂತರನ್ನು ಸರ್ಕಾರ ಸ್ವಲ್ಪ ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅಶಕ್ತರಾದ ಅನೇಕ ನಟರು ಇದ್ದಾರೆ, ಇವತ್ತು ಅವರು ತಮ್ಮ ಜೀವನವನ್ನು ನಡೆಸಲು ಆಗುತ್ತಿಲ್ಲ. ಅಂತಹವರ ಕಡೆಗೆ ಸರ್ಕಾರ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇವರೆಲ್ಲರ ಆತ್ಮಕ್ಕೆ ದೇವರು ಶಾಂತಿಯನ್ನು ನೀಡಲಿ ಎಂದು ಕೋರುತ್ತಾ, ಸರ್ಕಾರದಲ್ಲಿ ಒಂದು ಪ್ರಾರ್ಥನೆಯನ್ನು ನಾನು ಮಾಡಿಕೊಳ್ಳಲು ಬಯಸುತ್ತೇನೆ.

ಕ್ಯಾಪ್ಟನ್ ಗಣೇಶ್‌ರವರು ನನ್ನ ಕೊಠಡಿಗೆ ಬಂದು, ಇವತ್ತಿನ ಶ್ರದ್ಧಾಂಜಲಿ ಕಾರ್ಯಕ್ರಮ ಆದತಕ್ಷಣ ಸದನವನ್ನು ನಾಳೆಗೆ ಮುಂದೂಡುತ್ತಾರೆ ಎಂದು ಹೇಳಿದರು. ಈ ಎಲ್ಲರ ಸಾವಿನ ನೋವಿನ ಜೊತೆಗೆ ಇಂದು ಸದನ ಏಕೆ ನಡೆಯುತ್ತಿಲ್ಲ ಎನ್ನುವುದು ನನಗೆ ನೋವನ್ನು ಉಂಟು ಮಾಡಿದೆ. ಇಲ್ಲಿಗೆ ಬಂದ ಮೇಲೆ ನಾವು ಕರ್ನಾಟಕದ ಜನತೆಯ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಚರ್ಚೆ ಮಾಡಬೇಕಾದರೆ ನಾವು ಒಂದು ಪದ್ಧತಿಯನ್ನು ಹಾಕಿಕೊಳ್ಳಬೇಕಾಗುತ್ತದೆ. ಇದು ನನ್ನ ವೈಯಕ್ತಿಕವಲ್ಲ, ಎಲ್ಲರೂ ಒಟ್ಟಿಗೆ ಸೇರಿ ಪದ್ಧತಿಯನ್ನು ಹಾಕಿಕೊಳ್ಳಬೇಕು. ಎಲ್ಲರೂ ಒಟ್ಟಿಗೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳೋಣ. ಈಗ ನಿಧನ ಹೊಂದಿದವರ ಆತ್ಮಕ್ಕೆ ಶಾಂತಿಯನ್ನು ಕೋರಿ ನಾವು ಮನೆಗೆ ಹೋಗುತ್ತೇವೆ. ಶ್ರದ್ಧಾಂಜಲಿ ಅರ್ಪಣೆ ಮಾಡಿದ್ದೇವೆ ಎಂದು ತಾವು ಅವರ ಕುಟುಂಬದವರಿಗೆ ಪತ್ರವನ್ನು ಬರೆಯುತ್ತೀರಿ. ಇಲ್ಲಿಗೆ ಮುಗಿದು ಹೋಯಿತಾ? ಜ್ವಲಂತ ಸಮಸ್ಯೆಗಳನ್ನು ಚರ್ಚೆ ಮಾಡಲು ಈ ವಿಧಾನ ಮಂಡಲದ ಅಧಿವೇಶನವಿರುವುದು. ನಾನು ನಿನ್ನೆ ತಮಗೆ ಫೋನ್ ಮಾಡಿದಾಗ, ವಿಧಾನ ಪರಿಷತ್ತಿನ

ಸದಸ್ಯರು ಯಾರಾದರೂ ನಿಧನ ಹೊಂದಿದ್ದರೆ ಅಂತಹ ಸಂದರ್ಭದಲ್ಲಿ ನಾವು ಸದನವನ್ನು ಮುಂದೂಡುತ್ತೇವೆ, ವಿಧಾನ ಸಭೆಯ ಸದಸ್ಯರು ನಿಧನ ಹೊಂದಿದ್ದರೆ ನಾವು ಸದನವನ್ನು ಮುಂದೂಡುವುದಿಲ್ಲ, ನಡೆಯುತ್ತದೆ ಎಂದು ಹೇಳಿದ್ದಿರಿ. ಇವತ್ತು ತಾವು ತೆಗೆದುಕೊಂಡಿರುವ ತೀರ್ಮಾನಕ್ಕೆ ನಾವು ಬದ್ಧರಿದ್ದೇವೆ. ಆದರೆ ನಮ್ಮ ಪ್ರಾರ್ಥನೆ ಎಂದರೆ, ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತಿನ ಸದಸ್ಯರು ನಿಧನರಾದ ಸಂದರ್ಭದಲ್ಲಿ ಸದನವನ್ನು ನಾಳೆಗೆ ಮುಂದೂಡಿದರೆ ರಾಜ್ಯಕ್ಕೆ ಅನ್ಯಾಯವಾಗುತ್ತದೆ. ರಾಜ್ಯದ ಜ್ವಲಂತ ಸಮಸ್ಯೆಗಳನ್ನು ಚರ್ಚೆ ಮಾಡಲು ಈ ಸದನ ಇರುವುದು.

**(ಗೊಂದಲ)**

**ಸಭಾಪತಿಯವರು:–** ಅವರ ಅಭಿಪ್ರಾಯಗಳನ್ನು ಹೇಳಲಿ ಬಿಡಿ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ನಾವು ಇನ್ನು ತೀರ್ಮಾನ ತೆಗೆದುಕೊಂಡಿರುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ತಾವು ನಿರ್ಣಯ ತೆಗೆದುಕೊಳ್ಳುವುದಲ್ಲ, ನಮ್ಮ ಕಛೇರಿಗೆ ಈ ಸುದ್ದಿ ಬಂದಿದೆ. ನಾನು ಸಭಾಪತಿಯವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಸರ್ಕಾರವನ್ನು ಕೇಳಲಿಲ್ಲ ನಾನು, ನೀವು ಏಕೆ ಮಾತನಾಡುತ್ತೀರಿ? ನಿಮ್ಮ ಸುದ್ದಿಗೆ ಬಂದಿಲ್ಲ ನಾನು.

**ಶ್ರೀ ಆರ್.ವಿ.ವೆಂಕಟೇಶ್:–** ತಾವು ಏಕೆ ಮಾತನಾಡುತ್ತೀರಿ ಎಂದರೆ ಏನು ಅರ್ಥ? ಇದು ಹಿಂದಿನಿಂದ ಬಂದಿರುವಂತಹ ಪದ್ಧತಿ. ಇವರು ಮಾತನಾಡಬೇಕು ಎಂದ ತಕ್ಷಣ ಎಲ್ಲಾ ಆಗಬೇಕು ಎಂದರೆ ಹೇಗೆ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಗಳೆ, ಶ್ರದ್ಧಾಂಜಲಿ ಸಭೆಯಲ್ಲಿ ನಾನು ಬೇರೆ ವಿಷಯವನ್ನು ಮಾತನಾಡಲು ಇಷ್ಟಪಡುವುದಿಲ್ಲ. ಆದರೆ ಇದೇ ಪದ್ದತಿ ಮುಂದುವರೆದರೆ ಹೀಗೆ ಮುಂದುವರೆಯುತ್ತದೆ ಎನ್ನುವುದು ನನ್ನ ಮನಸ್ಸಿನ ಭಾವನೆಯನ್ನು ಹಂಚಿಕೊಳ್ಳುತ್ತಿದ್ದೇನೆ. ನಾನು ಮತ್ತೊಮ್ಮೆ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ವಿಧಾನಮಂಡಲದ ಯಾವುದೇ ಸದಸ್ಯರು ನಿಧನರಾದಾಗ ಅವರ ಆತ್ಮಕ್ಕೆ ಶಾಂತಿ ಸಿಗಬೇಕಾದರೆ, ರಾಜ್ಯದ ಬಗ್ಗೆ ಹೆಚ್ಚಿನ ಚಿಂತನೆಯಾದರೆ ಅವರ ಆತ್ಮಕ್ಕೆ ಶಾಂತಿ ಸಿಗುತ್ತದೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಇಂದು ಮಂಡನೆ ಮಾಡಿರುವ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ಸೂಚಿಸುತ್ತಾ, ಇವರೆಲ್ಲರ ಆತ್ಮಕ್ಕೆ ನನ್ನ ವೈಯಕ್ತಿಕ ಮತ್ತು ನನ್ನ ಪಕ್ಷದ ಪರವಾಗಿ ಸಂತಾಪವನ್ನು ಸೂಚಿಸುತ್ತೇನೆ.

**ಸಭಾಪತಿಯವರು:–** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಭರಿಸುವಂತಹ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಈ ಹಂತದಲ್ಲಿ ಸದನದಲ್ಲಿ ಎಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಲಾಯಿತು)**

**ಸಭಾಪತಿಯವರು:–** ಸದನದಲ್ಲಿ ಸೂಚಿಸಿದ ಸಂತಾಪ ಸೂಚನೆಯನ್ನು ಮೃತ ಗಣ್ಯರ ಕುಟುಂಬದವರಿಗೆ ಕಳುಹಿಸಲಾಗುವುದು.

ಇವತ್ತಿನ ಕಾರ್ಯಕ್ರಮದ ಪಟ್ಟಿಯಲ್ಲಿ ಇರುವ ಹಾಗೆ ಒಂದು ಸಣ್ಣ ಕೆಲಸವನ್ನು ನಾನು ಮಾಡಲೇ ಬೇಕು. ಈಗ ಕಾರ್ಯದರ್ಶಿಗಳ ವರದಿ. ನಂತರ ಸಭಾನಾಯಕರು ಇವತ್ತಿನ ಪ್ರಶ್ನೆಗಳನ್ನು ಸದನದಲ್ಲಿ lay ಮಾಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಶ್ರದ್ಧಾಂಜಲಿ ಮಾಡಿ ಸದನವನ್ನು ನಾಳೆಗೆ ಮುಂದೂಡುವುದಾದರೆ, ಅದನ್ನು ನಾಳೆ ಮಾಡಿ.

**ಸಭಾಪತಿಯವರು:–** ಮೊದಲನೆಯ ದಿವಸ ಕಾರ್ಯದರ್ಶಿಗಳ ವರದಿಯನ್ನು ಮಂಡನೆ ಮಾಡಬೇಕು ಎನ್ನುವುದು ನಮ್ಮ ಪದ್ಧತಿಯಲ್ಲಿ ಇರುವುದು. ಇವತ್ತು ಲಿಸ್ಟ್ ಆಗಿರುವ ಪ್ರಶ್ನೆಗಳನ್ನು lay ಮಾಡಿಬಿಡಲಿ. ಇಲ್ಲದಿದ್ದರೆ ಅದು ಲ್ಯಾಪ್ಸ್ ಆಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಪ್ರಶ್ನೆಗಳನ್ನು lay ಮಾಡಿದರೆ ನಮಗೆ ಉತ್ತರಗಳೇ ಸಿಗುವುದಿಲ್ಲ. ದಯಮಾಡಿ ಮುಂದಿನ ವಾರ ತೆಗೆದುಕೊಳ್ಳಿ. ಈ ರೀತಿ ಮಾಡುವುದು ಪದ್ಧತಿಯಲ್ಲ.

**ಸಭಾಪತಿಯವರು:–** ಮುಂದಿನ ವಾರ 15 ಪ್ರಶ್ನೆಗಳ ಲಿಸ್ಟ್ ಆಗಿದೆ. ಈ 15 ಪ್ರಶ್ನೆಗಳು ಸೇರಿದರೆ 30 ಪ್ರಶ್ನೆಗಳಾಗುತ್ತವೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸದನ ನಡೆಸಿ ನಾವು ಚರ್ಚೆ ಮಾಡುತ್ತೇವೆ.

**ಸಭಾಪತಿಯವರು:–** ಮೃತರ ಗೌರವಾರ್ಥ ಈಗ ಸದನವನ್ನು ನಾಳೆ ಬೆಳಗ್ಗೆ 11–00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 1 ಗಂಟೆ 16 ನಿಮಿಷಕ್ಕೆ ಮುಕ್ತಾಯಗೊಂಡು,

ಪುನಃ ದಿನಾಂಕ 17ನೇ ನವೆಂಬರ್ ಮಾಹೆ 2015ರ

ಮಂಗಳವಾರದಂದು ಬೆಳಗ್ಗೆ 11–00 ಗಂಟೆಗೆ ಸೇರಲು

ನಿಶ್ಚಯಿಸಿತು)